# ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 9 ಸಂಚಿಕೆ 8 ಫೆಬ್ರವರಿ 22, 1987 ಬೆಲೆ 1 ರೂ.


ಒಳಗಿನ ಪುಟಗಳಲ್ಲಿ



## ಪಂಜಾಬಿನಲ್ಲಿ ಪ್ರಜಾಪ್ರಭುತ್ವಕ್ಕೇ ಸವಾಲು

ಕಾ|| ಹರ್‌ಕಿಶನ್ ಸಿಂಗ್ ಸುರ್ಜಿತ್

ಫೆಬ್ರವರಿ 9ರಂದು ಅಮೃತಸರದ ಐದು ಉಚ್ಚ ಅರ್ಚಕರು ಸುರ್ಜಿತ ಸಿಂಗಬರ್ನಾಲಾ ಅವರನ್ನ "ತಂಕಯ್ಯ" ಅಂದರೆ ಧರ್ಮಬಾಹಿರನೆಂದು ಸಾರಿದರು. ಅವನ ಮೇಲೆ ಹೊರಿಸಿದ ಆರೋಪಕ್ಕೆ ಉತ್ತರವನ್ನು ಫೆ. 11 ಮಧ್ಯಾಹ್ನ 2 ಗಂಟೆಯೊಳಗೆ ಸಮಕ್ಷಮ ಅಕಾಲ್‌ತಕ್ತ್‌ಗೆ ಬಂದು ಒಪ್ಪಿಸಬೇಕೆಂದೂ, ಅಲ್ಲಿ ತನಕ ಎಲ್ಲಾ ಸಿಖ್ಖರು ಅವರನ್ನು ಬಹಿಷ್ಕರಿಸಬೇಕೆಂದೂ ಸಾರಿದ್ದರು.

ಪಂಜಾಬಿನ ಸರಕಾರವನ್ನು ಅಕಾಲ್ ತಕ್ತ್‌ನ್ನು ವಶಪಡಿಸಿಕೊಳ್ಳುವ ದುರುದ್ದೇಶದಿಂದ ಅಂಥ ಹುಕುಂ ನಾಮೆ ಹೊರಡಿಸಿದೆ. ಅಕಾಲಿದಳವನ್ನು ವಶಪಡಿಸಿಕೊಳ್ಳುವ ಮತ್ತು ಬರ್ನಾಲಾರವರನ್ನು ಪದಚ್ಯುತಗೊಳಿಸುವ ತಮ್ಮ ಹಿಂದಿನ ಪ್ರಯತ್ನ ವಿಫಲಗೊಂಡುದರಿಂದ ರಾಜಕೀಯ ಹಿಡಿತ ವಶಪಡಿಸಿಕೊಳ್ಳುವದುರುದ್ದೇಶದಿಂದ ಈಗ ಧಾರ್ಮಿಕ ಅಧಿಕಾರವನ್ನು ಉಪಯೋಗಿಸುತ್ತಿದ್ದಾರೆ. ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ರಕ್ಷಿಸುವ ಬರ್ನಾಲಾ ಅವರ ಕ್ರಮವನ್ನು ಎಲ್ಲ ರಾಜಕೀಯ ಪಕ್ಷಗಳೂ, ಪಂಜಾಬಿನ ಹಾಗೂ ಹೊರಗಿನ ಸಿಖ್ ಧಾರ್ಮಿಕ ಸಂಸ್ಥೆಗಳೂ, ಸಾರ್ವಜನಿಕರೂ ಬೆಂಬಲಿಸಿದ್ದಾರೆ. ದೇಶದ ಐಕ್ಯತೆಯನ್ನು ಮುರಿಯುವ ಸಾಮ್ರಾಜ್ಯಶಾಹಿ ಬೆಂಬಲಿತ ಉಗ್ರವಾದಿಗಳ ಉದ್ದೇಶವನ್ನು ಸೋಲಿಸಿ, ಐಕ್ಯತೆಯನ್ನು ಕಾಪಾಡಲು ಅವರಿಗೆ ಸಂಪೂರ್ಣ ಬೆಂಬಲ ನೀಡಿದ್ದಾರೆ.

ಬರ್ನಾಲಾ ಅವರ ಅವರ ಅಕಾಲಿದಳ (ಲೊಂಗೋವಾಲ) ಒಂದನ್ನು ಬಿಟ್ಟು ಬೇರೆ ಎಲ್ಲಾ ಅಕಾಲಿದಳದ ಗುಂಪುಗಳು ಉಚ್ಚ ಅರ್ಚಕರಿಗೆ ಶರಣಾಗತರಾದರು. ಅದಾದ ನಂತರ ಅಕಾಲಿದಳದ 65ವರ್ಷಗಳ ಪರಂಪರೆಯನ್ನು ಗಾಳಿಗೆ ತೂರಿ ಈ ಅರ್ಚಕರು ಪಂಥದ ಹೊಸ ಕಾರ್ಯಕ್ರಮ ಪ್ರಕಟಿಸಿದರು. ಅದರಲ್ಲಿಯ ಒಂದಂಶವೇನೆಂದರೆ ಹೊಸತಾಗಿ ಸಂಘಟಿಸಲ್ಪಟ್ಟ ಅಕಾಲಿದಳವು ಕೇಂದ್ರ ನೇಮಿಸುವ ಯಾವುದೇ ನ್ಯಾಯಾಂಗ ಕಮಿಷನಿನಲ್ಲಿ ಭಾಗೀದಾರವಾಗಲಾರದು. ಹೊಸ

[8ನೇ ಪುಟನೋಡಿ]

## ಮಂಡಲ್ ಪಂಚಾಯತ್‌ಗಳಿಗೆ ನಾಮಕರಣ ಸಲ್ಲದು

-ಎನ್. ಕೆ. ಉಪಾಧ್ಯಾಯ

ಆರಿಸಿಬಾರದವರಿಗೆ ಮತದಾನದ ಹಕ್ಕುಕೊಡುವ' ನಾಮಕರಣ ಮಾಡುವ ಪದ್ಧತಿಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ವಿರೋಧಿಸುತ್ತದೆ. ಅಂಥ ಕ್ರಮ ಪ್ರಜಾಪ್ರಭುತ್ವಕ್ಕೆ ವಿರೋಧವಾಗಿದೆ. ಜನತಾ ಪಕ್ಷದಲ್ಲಿ ಗುಂಪುಗಾರಿಕೆ ಇದೆ. ಪ್ರತಿಯೊಂದು ಗುಂಪೂ ಅಧಿಕಾರ ಸ್ಥಾನ ಗಿಟ್ಟಿಸುವ ಹೊಂಚಿನಲ್ಲಿವೆ. ಆದ್ದರಿಂದಲೇ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್‌ಗಳಿಗೆ ಅಧಿಕಾರಿಗಳನ್ನು ಆರಿಸುವ ದಿನಾಂಕ ಪ್ರಕಟವಾದ ಕೂಡಲೇ ಮಂಡಲ ಪಂಚಾಯತ್‌ಗಳ ಪ್ರಧಾನ-ಉಪಪ್ರಧಾನರ ಚುನಾವಣೆಗಳನ್ನು ಮುಂದೂಡಬೇಕೆಂಬ ಒತ್ತಾಯ ಜನತಾ ಪಕ್ಷದ ಶಾಸಕರಿಂದ ಬಂತು. ಮಂಡಲ ಪಂಚಾಯತ್‌ಗಳಿಗೆ ಸರಕಾರ ಇಬ್ಬರು ಸದಸ್ಯರನ್ನು ನಾಮಕರಣ ಮಾಡುವತನಕ ಚುನಾವಣೆ ನಡೆಯಬಾರದು, ಈಗ ಆರಿಸಲ್ಪಟ್ಟ ಸದಸ್ಯರಿಂದಲೇ ಚುನಾವಣೆ ನಡೆದದ್ದಾದರೆ ಜನತಾಪಕ್ಷ 300-400ಮಂಡಲ ಪಂಚಾಯತಿಗಳನ್ನು ಕಳೆದುಕೊಳ್ಳಬೇಕಾಗುತ್ತದೆ.ಆದ್ದರಿಂದ ನಾಮಕರಣ ಹೊಂದಿದ ಸದಸ್ಯರನ್ನೊಳಗೊಂಡೇ ಚುನಾವಣೆ ನಡೆಯಬೇಕೆಂಬ ಒತ್ತಡ ಈ ಶಾಸಕರದ್ದಾಗಿದೆ. ಸರಕಾರ ಅವರ ಒತ್ತಡಕ್ಕೆ ಮಣಿದು ಚುನಾವಣೆ ಮುಂದೆ ಹಾಕಿದೆ.

ವೆಂಕಟಸ್ವಾಮಿ ಆಯೋಗದ ಶಿಫಾರಸ್ಸುಗಳ ವಿರುದ್ಧ ನಡೆದ ಚಳುವಳಿಗಳ ನಂತರ ಸರಕಾರ ಹೊರಡಿಸಿದ ಆಜ್ಞೆಯಲ್ಲಿ ಒಕ್ಕಲಿಗ-ಲಿಂಗಾಯತರೇ ಹಿಂದುಳಿದ ಪಟ್ಟಿಯಲ್ಲಿ ಬಂದಿರುವುದರಿಂದ ಸರಕಾರದ ನಾಮಕರಣಕ್ಕೆ ಹೊಸ ತಿರುವು ನೀಡಿದಂತಾಗಿದೆ. ಆ ಕಾರಣಕ್ಕಾಗಿಯೇ ನಾಮಕರಣದ ತರುವಾಯವೇ ಪ್ರಧಾನ, ಉಪಪ್ರಧಾನರ ಚುನಾವಣೆ ನಡೆಯಬೇಕೆಂಬ ಒತ್ತಾಯ [illegible] ಇದು ಮೌಲ್ಯಾಧರಿತ [illegible]ಕಾರಣ.

[8ನೇ ಪುಟ ನೋಡಿ]

### ಕಾ|| ಚನ್ನಾಸಿಂಗ್ ಭಯೋದತ್ಪಾಕರ ಗುಂಡಿಗಾಹುತಿ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡರು, ಮಾಜಿ ಶಾಸಕರೂ ಆದ ಕಾ|| ಚನ್ನಾಸಿಂಗ್ ಅವರನ್ನು ತಮ್ಮ ಊರಾದ ಧೂಜ್ ಕಲಮಾನ್‌ನಲ್ಲಿ ಫೆಬ್ರವರಿ 15ರಂದು ಭಯೋತ್ಪಾದಕರು ಗುಂಡಿನಿಂದ ಕೊಲೆಮಾಡಿರುವುದನ್ನು ಸಿ.ಪಿ.ಐ. (ಎಂ) ರಾಜ್ಯ ಸಮಿತಿ ಬಲವಾಗಿ ಖಂಡಿಸುತ್ತದೆ. ಜಲಂಧರದಲ್ಲಿ ರಾಷ್ಟ್ರೀಯ ಭಾವೈಕ್ಯತೆ ಮತ್ತು ಜಾತ್ಯಾತೀತತೆಯ ಕುರಿತಾದ ಸಂಯುಕ್ತ ಸಮಾವೇಶದಲ್ಲಿ ಪಾಲ್ಗೊಂಡು ಅವರು ತಮ್ಮ ಊರಿಗೆ ವಾಪಸ್ಸಾಗುತ್ತಿರುವಾಗ ಭಯೋತ್ಪಾದಕರ ಗುಂಡಿಗೆ ಬಲಿಯಾದರು. ಕಾ|| ಚನ್ನಾಸಿಂಗ್ ಅವರಿಗೆ ಸಿ.ಪಿ.ಐ. (ಎಂ) ಶ್ರದ್ಧಾಂಜಲಿಯನ್ನರ್ಪಿಸಿ, ಯಾವ ಛಿದ್ರಕಾರಿ ಭಯೋತ್ಪಾದಕ ಶಕ್ತಿಗಳು ಅವರ ಕೊಲೆ ಮಾಡಿರುವ[illegible] ಅವರ ವಿರುದ್ಧ ನಿರಂತರ ಹೋರಾಟ ನಡೆಸುವ ಪಣ ತೊಡುತ್ತ

## ಪೋಲೀಸರ ಹತ್ಯಾಕಾಂಡ

ತುಮಕೂರು ಜಿಲ್ಲೆಯ ಪಾವಗಡದಲ್ಲಿ ಮಂಗಳವಾರ ನಡೆದ ಗೋಳಿಬಾರ್‌ನಲ್ಲಿ ಏಳು ಜನ ಸತ್ತು ಹನ್ನೆರಡಕ್ಕೂ ಹೆಚ್ಚು ಜನ ಪೋಲಿಸರ ಗುಂಡಿನಿಂದ ಗಾಯಗೊಂಡಿದ್ದಾರೆ. ಇನ್ನೂ ಹೆಚ್ಚಿನ ಜನರಿಗೆ ಗಾಯಗಳಾಗಿವೆ. ನರ್ಸ್ ಪದ್ಮಕ್ಕ ಹಾಗೂ ನಾರಾಯಣಸ್ವಾಮಿಯವರು ಪೋಲೀಸರ ಬೂಟಕಾಲಿನಲ್ಲಿ ತುಳಿತ, ಲಾಠಿ ಏಟಿನಿಂದ ತತ್ತರಿಸಿದ್ದಾರೆ. ಗೋಳಿ ಬಾರಿಗೆ ಪೂರ್ವಭಾವಿಯಾಗಿ ಲಾಠಿ ಪ್ರಹಾರವಾಗಲಿ, ಅಶ್ರುವಾಯು ಸಿಡಿತವಾಗಲೀ, ಯಾವುದೇ ತರದ ಎಚ್ಚರಿಕೆಯನ್ನಾಗಲಿ, ಪೋಲೀಸರು ನೀಡಲಿಲ್ಲ. ಕಳೆದ ಒಂದೆರಡು ವರ್ಷಗಳಿಂದ ಜನತಾ ಸರ್ಕಾರದ ಪೋಲೀಸರು ವರ್ತಿಸುವ ನೀತಿ ಇದಾಗಿದೆ. ಹಳೇ ಕಾಂಗ್ರೆಸ್ ಆಡಳಿತೆಯ ಕಾಲದಲ್ಲಿಯಂತೆ ಗುಂಡು ಹಾರಿಸುವ, ಜನರನ್ನು ಪಶುಗಳಂತೆ ನೋಡಿ ಅನಾಗರಿಕತೆಯಿಂದ ವರ್ತಿಸುವ ಹೀನಾಯ ಕೃತ್ಯ ಪೋಲೀಸ್ ಖಾತೆಯಲ್ಲಿ ಇತ್ತೀಚೆಗೆ ತಲೆ ಎತ್ತುತ್ತಿರುವುದು ಅಪಾಯಕಾರಿ ಹಾಗೂ ಖಂಡನೀಯ.

1984ರಲ್ಲಿ ಶಿವಾಜಿನಗರದ ಪೋಲೀಸ್ ಲಾಕಪಿನಲ್ಲಿ ಒಬ್ಬ ಸಂಶಯಾತ್ಮಕವಾಗಿ ಸತ್ತದ್ದನ್ನು ಜನರು ಪ್ರತಿಭಟಿಸಿದಾಗ ನಾಲ್ವರು ಪೋಲೀಸ್ ಗುಂಡಿಗೆ ಆಹುತಿಯಾದರು. ಪೋಲೀಸರ ವರ್ತನೆಯಲ್ಲಿ ಬದಲಾವಣೆ ತರಲಾಗುವುದು, ಎಂದು ಆಗ ಮುಖ್ಯಮಂತ್ರಿ ಜನರಿಗೆ ಆಶ್ವಾಸನೆ ನೀಡಿದ್ದರು. ಆದರೆ ಕಳೆದ ಒಂದು ಒಂದೂವರೆ ವರ್ಷಗಳಲ್ಲಿ ನಮ್ಮ ರಾಜ್ಯದಲ್ಲಿ ಹಿಂಸಾಚಾರ ಹೆಚ್ಚಾಗುತ್ತಿದೆ. ಪೋಲೀಸರ ಗೋಳಿಬಾರು ಹಾಗೆಯೇ ಮುಂದುವರಿದಿದೆ. ಆಳುವ ಪಕ್ಷದ, ಜನತಾ ಸರ್ಕಾರದ ಅಲಕ್ಷತನವೂ ಹೆಚ್ಚಾಗಿದೆ. ಹಿಂದೆ ಗೋಳಿಬಾರು, ಹಿಂಸಾಚಾರ ನಡೆದಾಗ ಜನತಾ ಮಂತ್ರಿಗಳು ಅವುಗಳ ಕುರಿತು ನಿಷ್ಕಾಳಜಿಯನ್ನೇ ತೋರಿಸುತ್ತಿದ್ದರು. ಆದರೆ ಪಾವಗಡ ಘಟನೆ ನಡೆದ ಕೂಡಲೇ ಗೃಹಮಂತ್ರಿ ರಾಚಯ್ಯ ಅಲ್ಲಿ ಧಾವಿಸಿ, ಜನರನ್ನು ಸ್ವಾಂತನಗೊಳಿಸಿ ನ್ಯಾಯಾಂಗ ಮತ್ತು ಆಡಳಿತಾತ್ಮಕ ವಿಚಾರಣೆ ನಡೆಸಿ, ತಪ್ಪಿತಸ್ಥರ ಮೇಲೆ ತುರ್ತು ಕ್ರಮಕ್ಕೆ ಗಮನ ಹರಿಸಿದ್ದಾರೆ. ಅದು ಸ್ವಾಗತಾರ್ಹ.

1985ರ ಚುನಾವಣೆಯ ನಂತರ ಜನತಾ ಸರ್ಕಾರ ಮತ್ತು ಮಂತ್ರಿಗಳು ಜನರ ಸಮಸ್ಯೆಗಳತ್ತ ಗಮನ ಹರಿಸುವುದನ್ನು ಅಲಕ್ಷ್ಯತನದಿಂದ ನೋಡುತ್ತಿರುವುದರಿಂದಲೇ ಭ್ರಷ್ಟಾಚಾರ ಪೋಲೀಸರ ದೌರ್ಜನ್ಯ ಹೆಚ್ಚಾಗಲು ಮುಖ್ಯ ಕಾರಣ ಯಜಮಾನನ ಹಿಡಿತ ಸಡಿಲಾದಾಗ ಅಧಿಕಾರಿಗಳೂ ನೌಕರದಾರರೂ ಪೋಲೀಸರೂ ಮನ ಬಂದಂತೆ ವರ್ತಿಸುವುದು ಅತಿಶಯೋಕ್ತಿ ಏನಲ್ಲ. ಅದರ ಪ್ರತಿಫಲ ಇತ್ತೀಚೆಗೆ ನಡೆಯುತ್ತಿರುವ ಪೋಲೀಸ್ ದೌರ್ಜನ್ಯ. ಹಾಗಲ್ಲದಿದ್ದರೆ, ಗುರುಮಿಟ್ಕಲ್‌ನಲ್ಲಿ ಚುನಾಯಿತ ಸಭೆ ಅಧ್ಯಕ್ಷರ ಸದಸ್ಯರ ಬೆತ್ತಲೆ ಮೆರವಣಿಗೆ, ಅನಧಿಕೃತವಾಗಿ ಲಾಕಪ್ಪುವಾಸ, ಪಾವಗಡದ ಗೋಳಿಬಾರುಗಳೆಲ್ಲಾ ನಡೆಯಲು ಸಾಧ್ಯವೇ ? ಗೃಹ ಮಂತ್ರಿ ರಾಚಯ್ಯನವರು ಪಾವಗಡಕ್ಕೆ ಹೋಗಿ ನೊಂದ, ಸಿಟ್ಟಿಗೆದ್ದ ಜನರನ್ನು ಸ್ವಾಂತನ ಗೊಳಿಸಿ, ಅಧಿಕಾರಿಗಳನ್ನು ಅನಾಮತ್ ಮಾಡಿ, ಗೋಳಿಬಾರಿನ ವಿಚಾರಣೆಗೆ ಆದೇಶ ಮಾಡಿರುವುದರಿಂದಲೇ ಸಮಸ್ಯೆ ಬಗೆಹರಿಯುವುದಿಲ್ಲ. ಆಡಳಿತೆಯ ಹಿಡಿತ ಬಿಗಿಗೊಳ್ಳಬೇಕು. ಪೋಲೀಸರ ವರ್ತನೆಗೆ ಮಾರ್ಗದರ್ಶನ ಬೇಕು. ತಪ್ಪಿತಸ್ಥರ ಮೇಲೆ ಕೂಡಲೇ ಕಠಿಣ ಕ್ರಮ ಕೈಗೊಳ್ಳುವ ಧೈರ್ಯಬೇಕು. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಮುಖಂಡತ್ವದ ಎಡರಂಗ ಸರ

[8ನೇ ಪುಟ ನೋಡಿ]

# ಮುಂಗಡ ಪತ್ರದ ಮುನ್ನ

ಪ್ರಧಾನಿ ರಾಜೀವಗಾಂಧಿಯ, 'ನೂತನ ಆರ್ಥಿಕ ನೀತಿಯು' ಹಾಗೂ ಏಳನೇ ಯೋಜನೆಯ ಎರಡು ವರ್ಷಗಳು ಮುಗಿದು, ಮೂರನೇ ವರ್ಷಪ್ರಾರಂಭವಾಗುತ್ತಿರುವಾಗ, ಪ್ರಾರಂಭದ ಜಿಕೋತ್ತರಗಳು ಅಶ್ವಾಸನೆಗಳು ಕ್ರಮೇಣ ಮರೆಯಾಗಿ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯ ಅಸ್ಥಿರತೆ ಹಾಗೂ ಬಿಕ್ಕಟ್ಟಿನ ನಗ್ನ ಚಿತ್ರ ಇನ್ನಷ್ಟು ಸ್ಪಷ್ಟವಾಗುತ್ತಿದೆ. ಜನಸಾಮಾನ್ಯರ ಜೀವನ ಸ್ಥಿತಿ ಮತ್ತಷ್ಟು ಹದಗೆಡಲಾರಂಭಿಸಿದೆ. ಆರ್ಥಿಕ ದುಃಸ್ಥಿತಿಯ ಕೆಲವು ಅಂಶಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

## ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಹಿನ್ನಡೆ

1985-86 ರಲ್ಲಿ ಆಹಾರ ಧಾನ್ಯಗಳ ಒಟ್ಟು ಉತ್ಪಾದನೆಯು 150 ಮಿ.ಟನ್‌ಗಳ ಮಟ್ಟದಲಿಯೇ ಸ್ಥಗಿತಗೊಂಡಿದೆ. ಅಲ್ಲದೆ, 1983-84ರ ಗರಿಷ್ಟ ಮಟ್ಟದ 152.4 ಮಿ.ಟನ್‌ಗಳ ಮಟ್ಟಕ್ಕೂ ಮುಟ್ಟದಿರುವುದನ್ನು ಗಮನಿಸಬೇಕು. ಖರೀಫ್ ಬೆಳೆಯು 1986ಕ್ಕೆ 89 ಮಿ ಟನ್ ಎಂದು ನಿರೀಕ್ಷಿಸಿದರೂ, ಇತ್ತೀಚಿನ ಸಮೀಕ್ಷೆಯಂತೆ 85 ಮಿ ಟನ್‌ಗಳಷ್ಟೇ ಆಗಬಹುದೆಂದೂ, 4 ಮಿ.ಟನ್ ಕಡಿಮೆಯಾಗುವುದೆಂದೂ ತಿಳಿದು ಬಂದಿದೆ. ಈ ಕೊರತೆ ಅಕ್ಕಿ ಬೆಳೆಯಲ್ಲಿಯೇ ಕಂಡು 1986ರ ಖರೀಫ್ ಬೆಳೆಯಲ್ಲಿ ಅಕ್ಕಿಯ ಫಸಲು 55 ಮಿ ಟನ್‌ಗಳದಾಗಿದ್ದು 1985ರಲ್ಲಿ 59 ಮಿ ಟನ್‌ಗಳಷ್ಟಕ್ಕಿತ್ತು. ದೇಶದ ಬಹುಭಾಗದ ಜನರ ಬೇಡಿಕೆಯಾಗಿದ್ದ ಅಕ್ಕಿ ಹಾಗೂ ದೊರಗು ಧಾನ್ಯಗಳ (ರಾಗಿ, ಜೋಳ ನವಣೆ) ಉತ್ಪಾದನೆ ಸ್ಥಗಿತಗೊಂಡಿದೆ. ಅಲ್ಲದೇ, ಇಳಿಮುಖವಾಗುತ್ತಿದೆ. ಗೋಧಿ ಬೆಳೆ ಮಾತ್ರ ಈ ವರ್ಷವೂ ಹೆಚ್ಚು ಕಡಿಮೆ ಕಳೆದ ವರ್ಷದಷ್ಟೇ 64-65 ಮಿ. ಟನ್‌ಗಳಷ್ಟಾಗಿದೆ. ಒಂದೆಡೆ, ಆಹಾರ ಧಾನ್ಯಗಳ ಉತ್ಪಾದನೆ ಸ್ಥಗಿತ ಹಾಗೂ ಇಳಿಮುಖ. ಇನ್ನೊಂದೆಡೆ, ಸರ್ಕಾರದ ಗೋದಾಮುಗಳಲ್ಲಿ ಆಹಾರ ಧಾನ್ಯಗಳ ಸಂಗ್ರಹಣೆ ಹೆಚ್ಚುತ್ತಿದೆ. ಅದಕ್ಕೆ ಆಂತರಿಕ ಹಾಗೂ ವಿದೇಶಿ ಮಾರುಕಟ್ಟೆಯಿಲ್ಲ. ಆಂತರಿಕವಾಗಿ ಜನಸಾಮಾನ್ಯರ ಗ್ರಾಹಕ ಶಕ್ತಿ ಕುಸಿಯುತ್ತಿದೆ. ಅವರು ಜೀವನಾವಶ್ಯಕ ವಸ್ತುಗಳಾದ ಆಹಾರ ಧಾನ್ಯಗಳನ್ನೂ ಕೊಂಡುಕೊಳ್ಳಲು ಅಸಮರ್ಥರಾಗಿದ್ದಾರೆ. ಅಂತರಾಷ್ಟ್ರೀಯವಾಗಿ ಆಹಾರ ಧಾನ್ಯಗಳ ವ್ಯಾಪಾರದಲ್ಲಿ ಭಾರೀ ಪೈಪೋಟಿಯಿದೆ. ಬೆಲೆ ಹಾಗೂ ಗುಣಮಟ್ಟದಲ್ಲಿ ಅದನ್ನು ಎದುರಿಸಲು ನಮ್ಮ ದೇಶಕ್ಕೆ ಸಾಧ್ಯವಾಗುತ್ತಿಲ್ಲ.

## ಎರಡಂಕೆಯ ಹಣದುಬ್ಬರ ದರ

ಆಹಾರ ಧಾನ್ಯಗಳ ಉತ್ಪಾದನೆ ಇಳಿಮುಖವಾಗುವುದನ್ನು ನಿರೀಕ್ಷಿಸುತ್ತಿದಂತೆಯೇ, ಮಾರುಕಟ್ಟೆಗಳಲ್ಲಿ ಅವಗಳ ಬೆಲೆ ಏರಿಕೆ ಇನ್ನಷ್ಟು ಹೆಚ್ಚುವುದು. ಇಕನಾಮಿಕ್ಸ್ ಟೈಂಸ್ ಪತ್ರಿಕೆಯ ಅಂಕೆ ಸಂಖ್ಯೆಗಳಂತೆ, ಅಕ್ಕಿ ಗೋಧಿಗಳ ಬೆಲೆ ಸಗಟು ಮಾರುಕಟ್ಟೆಯಲ್ಲಿ ಕಳೆದ ಒಂದು ವರ್ಷದಲ್ಲಿ ಶೇ 10ರಷ್ಟು ಏರಿರುವದು ಚಿಲ್ಲರೆ ಮಾರುಕಟ್ಟೆಯಲ್ಲಿ ಅಕ್ಕಿಯ ಬೆಲೆ ಶೇ. 21ರಷ್ಟು ಏರಿರುವುದು! ಸರ್ಕಾರದ ಗೋದಾಮಿನಲ್ಲಿರುವ ಆಹಾರ ಧಾನ್ಯ ಸಂಗ್ರಹಣೆಯನ್ನು ಸಗಟು ಹಾಗೂ ಚಿಲ್ಲರೆ ಮಾರುಕಟ್ಟೆಗಳಲ್ಲಿನ ಬೆಲೆಮಟ್ಟವನ್ನು ಇಳಿಸಲು ಬಿಡುಗಡೆಮಾಡುತ್ತಿಲ್ಲ ಸರ್ಕಾರದ ಆಹಾರ ಧಾನ್ಯಗಳನ್ನು ನಿಗದಿ ಬೆಲೆಗೆ ಖರೀದಿಸಿ ಸಂಗ್ರಹಿಸುವ ಕ್ರಮ ಹೆಚ್ಚಾಗಿ ಶ್ರೀಮಂತ ರೈತರಿಗೇ ಪ್ರಯೋಜನವಾಗುವುದು. ಅವಸರವಾಗಿ ಫಸಲನ್ನು ಮಾರುವುದು ಅನಿವಾರ್ಯವಾಗಿರುವ ಬಡ ಮತ್ತು ಮಧ್ಯ

ಆರ್. ಚಂದ್ರ

ಮ ರೈತರಿಗೆ ಇದು ಪ್ರಯೋಜನವಾಗುತ್ತಿಲ್ಲ. ಸಿದ್ಧ ವಸ್ತುಗಳ ಸಗಟು ಮತ್ತು ಚಿಲ್ಲರೆ ಮಾರುಕಟ್ಟೆಗಳ ಬೆಲೆಗಳೂ ಶೇ. 15ರದಲ್ಲಿ ಏರುತ್ತಿದೆ. ಕೈಗಾರಿಕೆ ಕಾರ್ಮಿಕರ ಗ್ರಾಹಕರ ಬೆಲೆ ಸೂಚಿ [1960 =100] ಜನವರಿ 1986 ರಲ್ಲಿ 629ಆಗಿದ್ದು, ನವಂಬರ್ 1986 ರಲ್ಲಿ 692ಕ್ಕೆ ನೆಗೆಯಿತು. ಸುಮಾರು ಶೇ. 10ರಷ್ಟು ಬೆಲೆಏರಿಕೆ-ಹಣದುಬ್ಬರ ನಗದು ಮಾರುಕಟ್ಟೆಯ ಬೆಲೆಸೂಚಿ [1970-71 =100] 1985ರ ಅಂತ್ಯದಲ್ಲಿ 351.1ಆಗಿದ್ದು, 1986ರ ಅಂತ್ಯದಲ್ಲಿ 377.8ಕ್ಕೇರಿತು. ಅಕ್ಟೋಬರ್ 86ರಲ್ಲಿ 384ಗರಿಷ್ಠ ಮಟ್ಟಕ್ಕೆ ನೆಗೆದಿತ್ತು. ಒಟ್ಟು 360 ವಸ್ತುಗಳ ಬೆಲೆಎಣಿಕೆಯಲ್ಲಿ ಆಹಾರ ಧಾನ್ಯಗಳೂ ಕೂಡಿದಂತೆ 190 ವಸ್ತುಗಳ ಬೆಲೆಗಳು 1986ರಲ್ಲಿ ವಿಪರೀತವಾಗಿ ಏರಿದವು. [ಇಂಡಿಯನ್ ಎಕ್ಸ್‌ಪ್ರೆಸ್; 15-1-87]

## ಕೈಗಾರಿಕಾಭಿವೃದ್ಧಿಯಲ್ಲಿ ಇಳಿಮುಖ:

7ನೇ ಯೋಜನೆಯಲ್ಲಿ ಕೈಗಾರಿಕಾಭಿವೃದ್ಧಿ ವಾರ್ಷಿಕ ಶೇ 8ರ ದರದಲ್ಲಿ ಹೆಚ್ಚಲಿರುವುದೆಂದು ನಿರೀಕ್ಷಿಸಲಾಗಿತ್ತು. ಆದರೆ, ಎಪ್ರಿಲ್-86ರಿಂದ ಆಗೋಸ್ಟ್ 86ವರೆಗೆ ಕೈಗಾರಿಕಾಭಿವೃದ್ಧಿಯ ದರ 5 6ರಷ್ಟೇ ಆಗಿತ್ತು. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಅಭಿವೃದ್ಧಿಯ ದರ ಶೇ 5.8 ರಷ್ಟಾಗಿತ್ತು. ಈ ವರ್ಷಾಂತ್ಯದಲ್ಲಿ 1986-87ರ ಸಾಲಿನ ಒಟ್ಟು ಕೈಗಾರಿಕಾಭಿವೃದ್ಧಿಯು ಶೇ 6ರ ಮಟ್ಟದಲ್ಲಿ ಕುಂಠಿತವಾಗುವುದು. ಕೈಗಾರಿಕಾಭಿವೃದ್ಧಿಯಲ್ಲಿ ಇಳಿಮುಖವಾಗಲು ದೇಶದ ಗುತ್ತೇದಾರಿ ಹಾಗೂ ವಿದೇಶಿ ಬಹುರಾಷ್ಟ್ರೀಯ ಪ್ರತಿನಿಧಿಗಳ ಪರವಾದ ರಾಜೀವ ಗಾಂಧಿಯ ಸರಕಾರದ 'ಉದಾರ ನೀತಿ'ಯೇ ಕಾರಣ. ರಾಷ್ಟ್ರದ ಕೈಗಾರಿಕಾಭಿವೃದ್ಧಿಗೆ ಮೂಲಾಧಾರವಾಗಿರುವ ಸಾರ್ವಜನಿಕ ರಂಗಕ್ಕೆ ಗೌಣಸ್ಥಾನ, ಯೋಜನೆಯ ಸಂಪನ್ಮೂಲಕ್ಕಾಗಿ ಅವುಗಳ ಉತ್ಪಾದನೆಗಳ ಬೆಲೆಏರಿಸುವಿಕೆ, ಯಂತ್ರೋಪಕರಣಗಳ ಮಾರುಕಟ್ಟೆಯಲ್ಲಿ ಹಿಂಜರಿತ, ಭಾರತದಂತಹ ಮೂರನೇ ಜಗತ್ತಿನ ದೇಶಗಳಲ್ಲಿ ಅವುಗಳಿಗಾಗಿ ಹೊಸಮಾರುಕಟ್ಟೆಗಳ ಶೋಧನೆ, ಆಮದುಮಾಡಿಕೊಳ್ಳಲು ವಿದೇಶಿ ಸಹಾಯ, ಪರಿಣಾಮವಾಗಿ ದೇಶದ ಆಂತರಿಕ ಯಂತ್ರೋಪಕರಣಗಳ ಉತ್ಪಾದನೆಯಲ್ಲಿ ಭಾರೀ ಹಿನ್ನಡೆ- ಎಪ್ರಿಲ್-86 ರಿಂದ ಆಗೋಸ್ಟ್ 86ರ ಅವಧಿಯಲ್ಲಿ ಶೇ 4.6 ಅಷ್ಟೆ. ಹಿಂದಿನ ವರ್ಷ ಇದೇ ಅವಧಿಯಲ್ಲಿ ಘನ ಉದ್ಯಮದ ಉತ್ಪಾದನಾ ದರ ಶೇ 5.9 ಪರಿಣಾಮ ಕೈಗಾರಿಕೆಯಲ್ಲಿ ಸ್ವಾವಲಂಬನೆಯ ಗುರಿ ಕೈಬಿಡಲಾಗಿದೆ. ವಿದೇಶಿ ಯಂತ್ರೋಪಕರಣಗಳು ದೇಶದಲ್ಲಿ ಧಾರಾಳವಾಗಿ ಆಮದು ಮಾಡಲ್ಪಡುತ್ತಿವೆ. ಒಟ್ಟು ಆಮದು ಮೌಲ್ಯ ರಫ್ತು ಮೌಲ್ಯಕ್ಕಿಂತ ಹೆಚ್ಚಾಗಿ ವಿದೇಶಿ ವ್ಯಾಪಾರದಲ್ಲಿ ಕೊರತೆ ಹೆಚ್ಚುತ್ತಿದೆ. ವಿದೇಶಿ ವಿನಿಮಯದ ಸಂಗ್ರಹ ಕರಗುತ್ತಿದ್ದು, ವಿದೇಶಿ ಸಾಲ ಸಹಾಯಗಳ ಬಲೆಯಲ್ಲಿ ದೇಶದ ಆರ್ಥಿಕತೆಯು ಮಿಸುಕಾಡುತ್ತಿದೆ. ಕೈಗಾರಿಕಾಭಿವೃದ್ಧಿಯ ಹಿನ್ನಡೆಯಿಂದಾಗಿ ದೇಶದ ಬಹು ಸಂಖ್ಯಾತ ಜನರನ್ನು ಕೃಷಿ ಅವಲಂಬನೆಯ ದರಿದ್ರಾವಸ್ಥೆಯಿಂದ ಪಾರುಮಾಡಲು ಸಾಧ್ಯವಾಗುತ್ತಿಲ್ಲ.

- ★ ಶೇ 10 ದರದ ಹಣದುಬ್ಬರ
- ★ ಜನಕೋಟಿಯ ಗ್ರಾಹಕರಶಕ್ತಿಯ ಕುಸಿತ
- ★ ಕೃಷಿ ಉತ್ಪಾದನೆಯಲ್ಲಿ ಹಿನ್ನಡೆ
- ★ ಸರ್ಕಾರದ ಆಹಾರ ಧಾನ್ಯಗಳ ಸಂಗ್ರಹಕ್ಕೆ ಮಾರುಕಟ್ಟೆಯ ಅಭಾವ
- ★ ಅಪಾತ್ರರಿಗೆ ಬಡತನ ಪರಿಹಾರಗಳ ಪ್ರಯೋಜನ
- ★ ಕೈಗಾರಿಕಾಭಿವೃದ್ಧಿಯ ಮಂದಗತಿ
- ★ ಷೇರು ಮಾರುಕಟ್ಟೆಯಲ್ಲಿ ಏರಿಳಿತ.
- ★ ವಿದೇಶಿ ವಿನಿಮಯ ಸಂಗ್ರಹದಲ್ಲಿ ಇಳಿಮುಖ.
- ★ ವಿದೇಶಿ ವ್ಯವಹಾರದಲ್ಲಿ ಭಾರಿ ಕೊರತೆ.
- ★ ಅಪ್ರತ್ಯಕ್ಷತೆರಿಗೆ ಭಾರ ಹೆಚ್ಚಳ.
- ★ ರಾಷ್ಟ್ರೀಯ ಉಳಿತಾಯದರ ನಿರೀಕ್ಷೆಗಿಂತ ಕಡಿಮೆ.
- ★ ಯೋಜನೆಗೆ ಸಂಪನ್ಮೂಲಗಳ ಕೊರತೆ.
- ★ ಇನ್ನಷ್ಟು ಕೊರತೆ ಹಣ ಸೃಷ್ಟಿ ಹಾಗೂ ಹಣ ದುಬ್ಬರ.
- ★ ವಿದೇಶಿ ಸಾಲಿಗರ ಬಲೆಯಲ್ಲಿ ಮಿಸುಕಾಟ.
- ★ ಕೆಲವು ಏಕಸ್ವಾಮ್ಯ ಕೈಗಾರಿಕಾ ಸಂಸ್ಥೆಗಳ ವಿರುದ್ಧ ತೆರಿಗೆ ಸಂಗ್ರಹ ಕಾರ್ಯದಲ್ಲಿ ಕಠಿಣ ಕ್ರಮ ಕೈಗೊಳ್ಳುತ್ತಿರುವಷ್ಟರಲ್ಲಿಯೇ ಹಣ ಕಾಸು ಮಂತ್ರಿ ವಿ.ಪಿ.ಸಿಂಘರ ವರ್ಗಾವಣೆ.
- ★ ಪ್ರಧಾನಿ ರಾಜೀವ್‌ಗಾಂಧಿಯೇ ಹಣಕಾಸು ಮಂತ್ರಿಯಾಗಿ 1987-88ರ ಮುಂಗಡ ಪತ್ರದ ಮಂಡನೆ.
- ★ ಸರ್ಕಾರಕ್ಕೆ ದುಡಿಯುವ ಜನರ ಎಚ್ಚರಿಕೆ.
- ★ 20-1-87ರ ಮೂಲಕ 21 ಲಕ್ಷ

# ಹೆಚ್ಚುತ್ತಿರುವ ಅಸ್ಥಿರತೆ ಮತ್ತು ಬಿಕ್ಕಟ್ಟು

## ಸಂಪನ್ಮೂಲದ ಕೊರತೆ, ಅಭಿವೃದ್ಧಿ ವೆಚ್ಚದಲ್ಲಿ ಇಳಿಮುಖ:

ಏಳನೇ ಯೋಜನೆಗೆ ಸಂಪನ್ಮೂಲ ಸಂಗ್ರಹಿಸುವ ಹೆಚ್ಚಿನ ವಿಧಾನಗಳು ಭರವಸೆದಾಯಕವಾಗಿಲ್ಲ. ರಫ್ತು ಆದಾಯ ಆಮದು ಖರ್ಚಿಗಿಂತ ಕಡಿಮೆಯಾಗಿ, 1985-86ರ ಅಂತ್ಯದಲ್ಲಿ ವಿದೇಶಿ ವ್ಯಾಪಾರದಲ್ಲಿ ರೂ 9000 ಕೋಟಿಯಷ್ಟು ಕೊರತೆ ಉಂಟಾಗಿತ್ತು. 1986-87ರಲ್ಲಿ ಇದು ಆತಂಕ ಕೊರತೆಯು ರೂ 7000 ಕೋಟಿಯ ಆದಾಯದ ಮಟ್ಟದಲ್ಲಿದೆ. ರಫ್ತು ಆದಾಯದ ಹಾಗೂ ಹೊಸ ಸಾಲಗಳ ಬಹುಭಾಗ ವಿದೇಶಿ ಸಾಲ ಮತ್ತು ಅದರ ಮೇಲಿನ ಬಡ್ಡಿ ತೀರಿಸಲಿಕ್ಕೆ ವಿನಿಯೋಗವಾಗುತ್ತಿದೆ. ವಿದೇಶಿ ವಿನಿಮಯದ ಸಂಗ್ರಹವು ರೂ 7639 ಕೋಟಿ [ಎಪ್ರಿಲ್-86] ಯಿಂದ ರೂ 6504 ಕೋಟಿಗಿಳಿದಿದೆ [ಅಕ್ಟೋಬರ್-86], ಅಂದರೆ ರೂ 1135 ಕೋಟಿಯಷ್ಟು ವಿದೇಶಿ ವಿನಿಮಯ ಸಂಗ್ರಹದಲ್ಲಿ ಇಳಿಮುಖ. ಈ ಸಮಸ್ಯೆಯನ್ನು ನೀಗಿಸಲು ಕಠಿಣ ಶರತ್ತುಗಳಲ್ಲಿ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ, ಜಾಗತಿಕ ಬ್ಯಾಂಕಿನಿಂದ ಹಾಗೂ ಹೆಚ್ಚಾಗಿ ಅಧಿಕ ಬಡ್ಡಿಯಲ್ಲಿ ವಿದೇಶಿ ಬಂಡವಾಳಶಾಹಿ ರಾಷ್ಟ್ರಗಳ ಮುಕ್ತ ಮಾರುಕಟ್ಟೆಗಳಿಂದ ಸಾಲ ಪಡೆಯುವುದು. ಅರ್ಥಾತ್ ಸ್ವಾವಲಂಬನೆಯ ಗುರಿಯನ್ನು ಕೈಬಿಟ್ಟು, ಬಂಡವಾಳಶಾಹಿ ವ್ಯವಸ್ಥೆಗನುಗುಣವಾಗಿ ನಮ್ಮ ಆರ್ಥಿಕ ವ್ಯವಸ್ಥೆಯನ್ನು ಏರಿಳಿಯಲು ಬಿಡುತ್ತಿರುವುದು.

ಯೋಜನೆಯ ಅವಧಿಯಲ್ಲಿ ರಾಷ್ಟ್ರೀಯ ಆದಾಯದಲ್ಲಿ ಉಳಿತಾಯದ ವಾರ್ಷಿಕ ದರ ಶೇ.26 ಎಂದು ಯೋಜನಾ ಆಯೋಗ ನಿಗದಿಪಡಿಸಿತ್ತು. ಅದನ್ನು ಪುನಃ ಪರಿಷ್ಕರಿಸಿ, ಕನಿಷ್ಠ ಶೇ. 24ರಷ್ಟಾದರೂ ಸಾಧಿಸಬೇಕೆಂದು ನಿರ್ಧರಿಸಲಾಗಿತ್ತು. ಆದರೆ, ವಾಸ್ತವಿಕವಾಗಿ ಉಳಿತಾಯದ ದರ ಶೇ22ಕ್ಕಿಂತ ಹೆಚ್ಚಾಗಲೇ ಇಲ್ಲ. 1985-86ರ ಹಾಗೂ 1986-87ರ ಮುಂಗಡ ಪತ್ರದ ಮುನ್ನ ರೈಲ್ವೆ, ಅಂಚೆ ತಂತಿ, ಪೆಟ್ರೋಲಿಯಂ, ಉಕ್ಕು, ಕಲ್ಲಿದ್ದಲು, ವಿದ್ಯುತ್, ಇತ್ಯಾದಿ ಮೂಲಭೂತ ಸೇವಾ ಸೌಲಭ್ಯಗಳ ಹಾಗೂ ಕೈಗಾರಿಕಾ ವಸ್ತುಗಳ ದರಗಳ ಏರಿಕೆಯಿಂದ ಸಾವಿರಾರು ಕೋಟಿ ರೂಪಾಯಿಗಳಷ್ಟು ಯೋಜನೆಗೆ ಸಂಪನ್ಮೂಲ ಒದಗಿಸಲು ನಿರ್ಧರಿಸಲಾಯಿತು. ಇದರ ಪರಿಣಾಮ, ಆರ್ಥಿಕ ಅಭಿವೃದ್ಧಿಯ ಒಟ್ಟು ವೆಚ್ಚವೇ ನಿರೀಕ್ಷೆಗಿಂತ ಹೆಚ್ಚುವುದಲ್ಲದೆ, ಅಭಿವೃದ್ಧಿ ಹೆಚ್ಚಾಗಲಾರದು. ಒಂದು ಘಾಯ ಮುಚ್ಚಲು ಇನ್ನೊಂದು ಘಾಯ ಮಾಡಿ ಮಾಂಸ ತುಂಬಿಕೊಂಡಂತೆಯೇ ಸರಿ! ಸಂಪನ್ಮೂಲದ ತೀವ್ರ ಕೊರತೆಯಿಂದ ಕೊರತೆ ಹಣ ಸೃಷ್ಟಿಯೂ ಹೆಚ್ಚುತ್ತದೆ. ಕಳೆದ ವರ್ಷ ಕೇಂದ್ರ ಮುಂಗಡ ಪತ್ರದಲ್ಲಿ ಕೊರತೆ ಹಣ ಸೃಷ್ಟಿ ರೂ 4600ಕೋಟಿಯಷ್ಟಾಗಿತ್ತು. ಕೇಂದ್ರ ಸರಕಾರ ರಿಸರ್ವ ಬ್ಯಾಂಕಿನಿಂದ ಪಡೆದ ತಾತ್ಕಾಲಿಕ ಸಾಲ [ಓವರ್ ಡ್ರಾಫ್ಟ್]ವನ್ನು ಗಣನೆಗೆ ತೆಗೆದುಕೊಂಡರೆ ಕೊರತೆಯ ಹಣ ರೂ 6000 ಕೋಟಿಯಷ್ಟಾಗಿತ್ತು. ಈ ವರ್ಷಾಂತ್ಯದಲ್ಲಿಯೂ ಕೊರತೆಯ ಹಣ ಇದೇ ಏರಿಕೆಯ ಮಟ್ಟದಲ್ಲಿರುವುದು. ಪರಿಣಾಮವಾಗಿ ಬೆಲೆಏರಿಕೆ-ಹಣದುಬ್ಬರ ಇನ್ನಷ್ಟು ಹೆಚ್ಚಾಗಲಿರುವುದು.

ಕಳೆದ ಎರಡು ವರ್ಷಗಳಲ್ಲಿ ತೆರಿಗೆ ದರಗಳನ್ನು ಇಳಿಸುವುದರಿಂದ, ತೆರಿಗೆ ಸಂಗ್ರಹ ಹೆಚ್ಚಾಗಿದೆ ಎಂದು ಬಹಳ ಹೊಗಳಲಾಗುತ್ತಿದೆ. ನಿಜಸ್ಥಿತಿ ಏನು? 1986-87ರ ಮೊದಲ ಎರಡು ತಿಂಗಳಲ್ಲಿ ಪ್ರತ್ಯಕ್ಷ ತೆರಿಗೆ ಸಂಗ್ರಹ ರೂ685 ಕೋಟಿಯಷ್ಟು ಮತ್ತು ಅಪ್ರತ್ಯಕ್ಷ ತೆರಿಗೆ ರೂ 2647 ಕೋಟಿಯಷ್ಟು ಹೆಚ್ಚಾಗಿದೆ ಎಂದು ತಿಳಿದು ಬಂದಿದೆ. [ಇಂಡಿಯನ್‌ಎಕ್ಸ್‌ಪ್ರೆಸ್; 9-2-87] ಆದರೆ, ತೆರಿಗೆದರಗಳನ್ನು ಕಡಿಮೆ ಮಾಡುವುದರಿಂದ ತೆರಿಗೆ ಸಂಗ್ರಹ ಹೆಚ್ಚಾಗಿದೆ ಎಂಬ ವಾದ ಸತ್ಯಕ್ಕೆ ದೂರ. ತೆರಿಗೆ ಸಂಗ್ರಹದಲ್ಲಿ ಕೆಲವು ಕ್ರಮ ಕೈಗೊಂಡುದರಿಂದ ಹಳೆಯ ಬಾಕಿ ವಸೂಲಿಯಾಗಿ, ಒಟ್ಟು ತೆರಿಗೆ ಸಂಗ್ರಹ ಹೆಚ್ಚಾಗಿರಬಹುದು. ಆಯಾಯ ವರ್ಷಕ್ಕೆ ಸಂಬಂಧಿಸಿದ ತೆರಿಗೆ ಸಂಗ್ರಹದಲ್ಲಿ ಹೆಚ್ಚಳವಾಗಲಿಲ್ಲ. ರೂ 37000 ಕೋಟಿಯಷ್ಟು ಪ್ರಮಾಣದ ಕಪ್ಪುಹಣದ ಪ್ರಭಾವವೂ ಕಡಿಮೆಯಾಗಲಿಲ್ಲ ನಾವು ಮುಖ್ಯವಾಗಿ ನೋಡಬೇಕಾದುದು ಆಸ್ತಿ ಆದಾಯಗಳ ಮೇಲಿನ ಪ್ರತ್ಯಕ್ಷ ತೆರಿಗೆಯ ಪ್ರಮಾಣ ಎಷ್ಟು? ಜನಸಾಮಾನ್ಯರನ್ನು ಬಡತನ ದಾರಿದ್ರ್ಯಕ್ಕೊಳಪಡಿಸುವ ಜೀವನಾವಶ್ಯಕ ವಸ್ತುಗಳ ಮೇಲಿನ ಅಪ್ರತ್ಯಕ್ಷ ತೆರಿಗೆಯ ಪ್ರಮಾಣ ಎಷ್ಟು? ಎಂದು. ಪ್ರತ್ಯಕ್ಷ ತೆರಿಗೆಯು 1950-51ರಲ್ಲಿ ರೂ 231ಕೋಟಿಯಷ್ಟಾಗಿದ್ದು 1986-87ರಲ್ಲಿ ರೂ 6437ಕೋಟಿಗೇರಿತು. 28 ಪಾಲು ಹೆಚ್ಚಾಯಿತು. ಆದರೆ ಈ ಅವಧಿಯಲ್ಲಿ ಅಪ್ರತ್ಯಕ್ಷ ತೆರಿಗೆಯು ರೂ

[6ನೇ ಪುಟ ನೋಡಿ]

## ಇದು ನಿಮಗೆ ಗೊತ್ತೇ ?

ಸಾಮಾನ್ಯವಾಗಿ ಪ್ರಾಣಿಗಳನ್ನು ಪ್ರಯೋಗ ಪಶುಗಳನ್ನಾಗಿ ಮಾಡುವುದು ಅನೇಕರಿಗೆ ತಿಳಿದ ವಿಷಯ. ಮಾನವರನ್ನು, ಅವರಿಗೆ ಅರಿವಿರದಂತೆ ಹಾನಿಕಾರಕ ಪ್ರಯೋಗಗಳಿಗೆ ಒಳಪಡಿಸಿದಾಗ ?

ಹಿಂದೆ ಇದು ನಡೆದಿರಲಿಲ್ಲವೆಂದಲ್ಲ. ನಾಜಿಗಳೆಂಬ ನರರೂಪೀ ರಕ್ಕಸರು ತಾವೇ ಕಾನ್‌ಸೆಂಟ್ರೇಷನ್ ಕ್ಯಾಂಪುಗಳಲ್ಲಿ ಹಾಕಿದ ಯಹೂದ್ಯರ ಮೇಲೆ ಸೋವಿಯತ್ ಮತ್ತಿತರ ಯುದ್ಧ ಕೈದಿಗಳ ಮೇಲೆ ಅನೇಕ ಪ್ರಯೋಗಗಳನ್ನು ನಡೆಸಿದರು.

ಸರಿ ಸುಮಾರು ಅದೇ ಸಮಯಕ್ಕೇ ಅಮೇರಿಕದಲ್ಲಿ ಆರಂಭವಾದ ಒಂದು ಪ್ರಯೋಗದ ವರದಿ ನೋಡಿ !

ಜನರನ್ನು ಉದ್ದೇಶ ಪೂರ್ವಕವಾಗಿ ಭಯಾನಕ ಅಣುವಿಕಿರಣದ ಪ್ರಭಾವಕ್ಕೆ ಒಳಪಡಿಸಲಾಯಿತು. ವಿಕಿರಣ ದೋಷಕ್ಕೊಳಗಾದ ಆಹಾರ ತಿನ್ನಿಸಲಾಯಿತು. ವಿಕಿರಣ ಪೂರಿತ ಇಂಜೆಕ್ಷನ್ ಚುಚ್ಚಲಾಯಿತು. ಈ ಮಾನವ ಪ್ರಯೋಗ ಪಶುಗಳಿಗೆ ಅರಿವೇ ಇರಲಿಲ್ಲ. ಯಾಕೆಂದರೆ ತಾವು ವೈದ್ಯಕೀಯ ಚಿಕಿತ್ಸೆ ಪಡೆಯುತ್ತಿದ್ದೇವೆಂದು ಅವರು ಭಾವಿಸಿದ್ದರು. ಆದರೆ ವಾಸ್ತವವಾಗಿ ಅವರು ನಿಧಾನವಾಗಿ ಯಾತನಾಮಯ ಸಾವಿನತ್ತ ಸಾಗಿದ್ದರು. ಇದು ಇಂದು ಜನಪ್ರಿಯವಾಗಿರುವಾಗ "ಹಾರರ್" ಕಾದಂಬರಿ, ಸಿನಿಮಾಗಳ ದೃಶ್ಯವಲ್ಲ. ಅಮೇರಿಕಾದ ಗೂಢಚರ್ಯ ಸಂಸ್ಥೆಗಳ ಕಡತಗಳನ್ನು ಅಧ್ಯಯನ ಮಾಡಿದ ಅಮೇರಿಕನ್ ಪ್ರತಿನಿಧಿ ಸಭೆಯ ಉಪಸಮಿತಿಯೊಂದರವರದಿ. ಈ ಕೃತ್ಯ ಹಿರೋಷಿಮಾ, ನಾಗಸಾಕಿಯ ಮೇಲೆ ಹಾಕಿದ ಅಣು ಬಾಂಬುಗಳನ್ನು ತಯಾರಿಸಿದ "ಮಾನ್ ಹಟ್ಟನ್ ಯೋಜನೆ" ಯ ಒಂದು ಭಾಗ. ಅಂದಿನಿಂದ ಇತ್ತೀಚಿನವರೆಗೂ 70 ರದಶಕದವರೆಗೂ ನೂರಾರು ಅಮೇರಿಕನ್ ವೃದ್ಧರು ಕೈದಿಗಳು, ಅಂಗವಿಕಲರು ಈ ಪ್ರಯೋಗಕ್ಕೆ ಬಲಿಯಾಗಿದ್ದಾರೆ.

## ಮಿನರ್ವ ಮಿಲ್‌ನಲ್ಲಿ ಕಾರ್ಮಿಕ ಅಶಾಂತಿ

ಮಿನರ್ವ ಮಿಲ್‌ನಲ್ಲಿ ಸಿ.ಐ.ಟಿ.ಯು.. ಐ.ಎನ್.ಟಿ.ಯು.ಸಿ. ಮತ್ತು ಸ್ವತಂತ್ರ ಕಾರ್ಮಿಕ ಸಂಘಗಳಿದ್ದು, ಮೂರು ಸಂಘಗಳೂ ಕೂಡಾ ಕಾರ್ಮಿಕರ ಬೇಡಿಕೆಗಳ ಬಗ್ಗೆ ಸಂಯುಕ್ತವಾಗಿ ಡೆಪ್ಯುಟಿ ಲೇಬರ್ ಕಮಿಶನರ್ ಅವರ ಮುಂದೆ ಅಹವಾಲು ಸಲ್ಲಿಸಿದ್ದವು. ಜನವರಿ 22ರಂದು ನಡೆದ ಸಂಧಾನ ಸಭೆಯಲ್ಲಿ ಮೂರು ಸಂಘಗಳ ಪ್ರತಿನಿಧಿಗಳೂ ಭಾಗವಹಿಸಿದ್ದರು. ಈ ಅವಧಿಯಲ್ಲಿ ಆಡಳಿತ ವರ್ಗವು ಸ್ವತಂತ್ರ ಸಂಘಕ್ಕೆ ಸೇರಿದ ಮೂವರು ಕಾರ್ಯಕರ್ತರನ್ನು ಸಸ್ಪೆಂಡ್ ಮಾಡಿತು ಮತ್ತು ಆ ಸಂಘವು ತನಗೆ ಶರಣಾಗುವಂತೆ ಚಿತಾವಣೆ ನಡೆಸಿತು. ಸ್ವತಂತ್ರ ಸಂಘವು ಆಡಳಿತ ವರ್ಗದೊಡನೆ ಒಪ್ಪಂದಕ್ಕೆ ಸಹಿಹಾಕಿತು. ಈ ಒಪ್ಪಂದವು ರಾಜೀವ ಗಾಂಧಿಯವರ ಹೊಸ ಜವಳಿ ನೀತಿಯನ್ನು ಜಾರಿಗೊಳಿಸುವಂತಹುದಾಗಿತ್ತು.

ಈ ಕಾರ್ಮಿಕ ವಿರೋಧೀ ಒಪ್ಪಂದಕ್ಕಾಗಿ ಆಡಳಿತ ವರ್ಗ ಕಾರ್ಮಿಕ ಸಂಘಕ್ಕೆ ಕೆಲವು ರಿಯಾಯಿತಿಗಳನ್ನು ಒದಗಿಸಿದೆ. ಅದರ ಪ್ರಕಾರ 420ಬದಲೀ ಕೆಲಸಗಾರರನ್ನು ಖಾಯಂಗೊಳಿಸುವ (ವಿಭಾಗವಾರು ಅಲ್ಲದೆ) ಆಶ್ವಾಸನೆ ನೀಡಿದೆ. ಸಿ.ಐ.ಟಿ.ಯು. ಸಂಘವು 1985ರ ಒಪ್ಪಂದವನ್ನು ಪೂರ್ತಿಯಾಗಿ ಉಲ್ಲಂಘಿಸುವ ಹೊಸ ಕಾರ್ಮಿಕ ದ್ರೋಹೀ ಒಪ್ಪಂದ ಜ್ಯಾರಿಯಾಗುವುದನ್ನು ವಿರೋಧಿಸುತ್ತಿದೆ.

ಒಪ್ಪಂದಕ್ಕೆ ಸಹಿಯಾದೊಡನೆಯೇ ಆಡಳಿತ ವರ್ಗ 20ಲಾರಿಗಳ ತುಂಬಾ ಆಟೋಮ್ಯಾಟಿಕ್ ಏರ್‌ಜೆಟ್ ಮಗ್ಗಗಳನ್ನು ಮತ್ತು ಬಿಡಿ ಭಾಗಗಳನ್ನು ಕಾರ್ಖಾನೆಗೆ ತರಿಸಿದಾಗ [ಫೆಬ್ರವರಿ 8 ರಂದು] ಸಿ ಐ ಟಿ ಯು. ಮತ್ತು ಐ ಎನ್.ಟಿ.ಯು.ಸಿ. ಕಾರ್ಯಕರ್ತರು ಅದನ್ನು ಕಾರ್ಖಾನೆಯೊಳಗೆ ಸಾಗಿಸದಂತೆ ತಡೆಹಿಡಿದಿದ್ದಾರೆ. ಈ ಸ್ವಯಂಚಾಲಿತ ಮಗ್ಗಗಳು ಮತ್ತು ಉದ್ದಿಮೆಯ ಆಧುನೀಕರಣ ನೂರಾರು ಕಾರ್ಮಿಕರನ್ನು ಉದ್ಯೋಗ ಹೀನರನ್ನಾಗಿಸಿ ಅವರ ಅನ್ನವನ್ನು ಕಸಿಯುವುದರಿಂದ ಮೇಲಿನ ಎರಡೂ ಸಂಘಗಳು ಇದನ್ನು ಪ್ರತಿಭಟಿಸಿ ಹೋರಾಟ ನಡೆಸುತ್ತಿದ್ದಾರೆ. ಈ ಗಾಗಲೇ 100ಮಂದಿ ಕಾರ್ಮಿಕರನ್ನು ಪೋಲೀಸರು ಬಂಧಿಸಿದ್ದಾರೆ. ಕಾರ್ಮಿಕ ವಿರೋಧೀ ಒಪ್ಪಂದವನ್ನು ಅಸಿಂಧುಗೊಳಿಸಿ, ಆಧುನೀಕರಣ ಕಾರ್ಯವನ್ನು ಕೈಬಿಡುವವರೆಗೆ ಹೋರಾಟ ಮುಂದುವರಿಯುವುದೆಂದು ಸಂಘದ ಪ್ರಕಟಣೆ ತಿಳಿಸಿದೆ.

## ಎಸ್. ಎಫ್. ಐ. : 8 ಜನ ಖಾಯಂ ಆಹ್ವಾನಿತರು

ರಾಜ್ಯಾದ್ಯಂತ ಹೊಸ ಪ್ರದೇಶಗಳಿಗೆ ಸಂಘಟನೆ ಹಬ್ಬುತ್ತಿರುವ ಹಿನ್ನೆಲೆಯಲ್ಲಿ ಕೆಳಕಂಡವರನ್ನು ರಾಜ್ಯ ಸಮಿತಿಗೆ ಖಾಯಂ ಆಹ್ವಾನಿತರಾಗಿ ಸೇರ್ಪಡೆ ಮಾಡಿಕೊಳ್ಳಲಾಗಿದೆ. ರಾಮನಗೌಡ (ರಾಯಚೂರು ಜಿಲ್ಲೆ), ಲಕ್ಷ್ಮೀನಾರಾಯಣ (ಕೋಲಾರ ಜಿಲ್ಲೆ), ಎಸ್.ಎಚ್. ಬಡೇಖಾನವರ್ (ಧಾರವಾಡ ಜಿಲ್ಲೆ), ಶಾಂತಾರಾಮ ನಾಯಕ್ (ಉ. ಕ. ಜಿಲ್ಲೆ), ಬಿ. ಉಮೇಶ್ (ತುಮಕೂರು), ಶ್ರೀಧರ ಕುಲಕರ್ಣಿ (ಬಿಜಾಪುರ), ರಾಜೇಶ್ ಸಂಗ್ರಾಮ್ (ಬೀದರ್) ಮತ್ತು ಚನ್ನಬಸಪ್ಪ (ಬಳ್ಳಾರಿ ಜಿಲ್ಲೆ).

ಜನವರಿ 26 ಮತ್ತು 27ರಂದು ಬೆಂಗಳೂರಿನಲ್ಲಿ ಜರುಗಿದ ಎಸ್.ಎಫ್.ಐ ರಾಜ್ಯ ಸಮಿತಿ ಸಭೆಯಲ್ಲಿ ಈ ತೀರ್ಮಾನವನ್ನು ಕೈಗೊಳ್ಳಲಾಯಿತು.

ವಿಶ್ವವಿದ್ಯಾಲಯಗಳ ಮಟ್ಟದ ಶೈಕ್ಷಣಿಕ ಸಮಸ್ಯೆಗಳ ಬಗ್ಗೆ ಪರಿಣಾಮಕಾರಿಯಾಗಿ ಗಮನಹರಿಸಲು ಸಾಧ್ಯವಾಗುವಂತೆ ಬೆಂಗಳೂರು, ಮೈಸೂರು, ಗುಲ್ಬರ್ಗಾ-ಮಂಗಳೂರು ಮತ್ತು ಕರ್ನಾಟಕ ವಿ. ವಿ. ಮಟ್ಟದ ಐದು ಸಮನ್ವಯ ಸಮಿತಿಗಳನ್ನು ರಚಿಸಲಾಗಿದೆ. ವಿದ್ಯಾರ್ಥಿನಿ ಉಪಸಮಿತಿಯನ್ನು ಪುನರ್‌ರಚಿಸಲಾಗಿದೆ.

ವಿದ್ಯಾರ್ಥಿ ವೇದಿಕೆ ಪ್ರಸಿಕೆನೊಂದಣಿ ಮತ್ತು ಅಂಚೆ ರಿಯಾಯಿತಿ ದೊರೆತಿದ್ದು 6ನೇ ಸಮ್ಮೇಳನದ ವಿಶೇಷ ಸಂಚಿಕೆಯೊಂದನ್ನು ಹೊರತರಲಾಗಿದೆ ಮಾರ್ಚಿ ತಿಂಗಳೊಳಗೆ ಪತ್ರಿಕೆಗೆ ಒಂದು ಸಾವಿರ ಚಂದಾದಾರರನ್ನು ನೊಂದಾಯಿಸಲು ರಾಜ್ಯಸಮಿತಿಯು ಕರೆ ನೀಡಿದೆ.

ರಾಜ್ಯಸಮಿತಿ ನಿಧಿಗಾಗಿ ಮತ್ತು ಪತ್ರಿಕೆಗಾಗಿ 30ಸಹಸ್ರ ರೂಪಾಯಿಗಳನ್ನು ಸಂಗ್ರಹಿಸಲು ಎಲ್ಲಾ ಶಾಖೆಗಳಿಗೂ ಕರೆ ನೀಡಲಾಗಿದೆ. ಈ ಗುರಿಯನ್ನು ತಲುಪಲು ನೆರವಾಗುವಂತೆ ಸೌಹಾರ್ದ ಸಂಘಟನೆಗಳಿಗೂ, ಹಿತೈಷಿಗಳಿಗ ವಿನಂತಿಸಲಾಗಿದೆ.

ಮಾರ್ಚ್ 23ರಂದು ರಾಜ್ಯಾದ್ಯಂತ ಡಿ.ವೈ.ಎಫ್.ಐ. ನೊಂದಿಗೆ ಸೇರಿ ಭಗತ್ ಸಿಂಗ್ ದಿನಾಚರಣೆಯನ್ನು ಆಚರಿಸುವ ಮೂಲಕ ವಿದ್ಯಾರ್ಥಿ-ಯುವಜನರಲ್ಲಿ ದೇಶಪ್ರೇಮ ಹಾಗೂ ರಾಷ್ಟ್ರೀಯ ಸಮಗ್ರತೆಯ ರಕ್ಷಣೆಯ ಕರ್ತವ್ಯದ ಅರಿವನ್ನು ಮೂಡಿಸಲು ಪ್ರಯತ್ನಿಸಬೇಕೆಂದು ಎಸ್.ಎಫ್.ಐ. ರಾಜ್ಯಸಮಿತಿಯು ಎಲ್ಲಾ ಶಾಖೆಗಳಿಗೆ ಆದೇಶ ನೀಡಿದೆ.

## ಕಳಸ ಪೋಲೀಸರ ದೌರ್ಜನ್ಯ

ಚಿಕ್ಕಮಗಳೂರು ಜಿಲ್ಲೆಯ ಕಳಸ ಪೋಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ ಜಯರಾಮೇಗೌಡ ಎಂಬುವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಸಿ.ಐ.ಟಿ.ಯು.ಗೆ ಸೇರಿ ಕರ್ನಾಟಕ ಪ್ರೊವಿನ್ಸಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್‌ನ ಕಳಸ ಶಾಖೆಯ ಸಂಘಟಕರಾದ ಕಾ. ಅಣ್ಣಿ ಎಂಬುದರು ಜಿಲ್ಲಾ ಪೋಲೀಸ ಸೂಪರಿಂಟೆಂಡೆಂಟ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಕಳಸದ ತೋಟದಲ್ಲಿ ನಡೆದ ವೈಯಕ್ತಿಕ ಜಗಳವೊಂದರ ಸಂಬಂಧದಲ್ಲಿ ಕಾ. ಅಣ್ಣಿ ಅವರೊಂದಿಗೆ ಠಾಣೆಗೆ ಹೋದಾಗ ಸಂಘವನ್ನು ಹೀನಾಯವಾಗಿ ಬೈದು, ಯೂನಿಯನ್ನನ್ನು ನಾಶ ಮಾಡುವೆನೆಂದು ಕೂಗಾಡುತ್ತ ಸಂಘದ ಸದಸ್ಯರಿಗೆ ಹೊಡೆದಿದ್ದಾರೆ. ನಿಮ್ಮಿಂದ ಏನೂ ಮಾಡಲಾಗುವುದಿಲ್ಲ, ನಮ್ಮಂತಾ ಕೂಲಿಯಾಳುಗಳಿಗೆಲ್ಲಾ ಕೇಡು ಮಾಡುವುದಿಲ್ಲ. ನೀವು ಎಸ್.ಪಿ. ಅಥವ ಡಿ.ಐ.ಜಿ.ಗೆ ದೂರು ಬೇಕಾದರೂ ಕೊಡಿ ಎಂದು ಕಳಸದ ಸಬ್ ಇನ್ಸ್‌ಪೆಕ್ಟರ ಬೆದರಿಕೆ ಹಾಕಿದ್ದಾರೆ, ಜನವರಿ 29ರಂದು ನಡೆದ ಒಂದು ಘಟನೆಯಲ್ಲಿ ಕಾ. ಅಣ್ಣಿಯವರಿಗೆ ಮೇಲ್ಕಂಡ ಸಬ್‌ಇನ್ಸ್‌ಪೆಕ್ಟರ್ ಎದೆಯ ಮೇಲೆ ಗುದ್ದಿ ಅಂಗಿಯನ್ನು ಹರಿದು ಹಾಕಿ ಲಾಕ್‌ಅಪ್‌ಗೆ ಹಾಕಿ ಒಂದು ಗಂಟೆಯ ನಂತರ ಬಿಡುಗಡೆ ಮಾಡಿದ್ದಾರೆ. ಬಿಡುಗಡೆ ಮಾಡುವಾಗ ಮತ್ತೊಮ್ಮೆ ಇಲ್ಲಿಗೆ ಕಾರ್ಮಿಕರ ಪರವಾಗಿ ಬಂದದ್ದಾದರೆ ಸೊಂಟ ಮುರಿಯುವುದಾಗಿ ಹೇಳಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಆದ್ದರಿಂದ ಈ ಬಗ್ಗೆ ಸಮಗ್ರ ತನಿಖೆ ನಡೆಸಿ ದಬ್ಬಾಳಿಕೆ ನಡೆಸುತ್ತಿರುವ ಸಬ್‌ಇನ್ಸ್‌ಪೆಕ್ಟರ್ ಮೇಲೆ ಸೂಕ್ತಕ್ರಮ ಜರುಗಿಸಿ ಸಂಘದ ಸದಸ್ಯರಿಗೆ ಮತ್ತು ತೋಟ ಕಾರ್ಮಿಕರಿಗೆ ಸೂಕ್ತ ರಕ್ಷಣೆ ಒದಗಿಸಬೇಕೆಂದು ಕಾ. ಅಣ್ಣಿಯವರು ಜಿಲ್ಲಾ ಆರಕ್ಷಕ ಅಧಿಕಾರಿಗಳಿಗೆ ಅರ್ಪಿಸಿರುವ ಮನವಿ ಪತ್ರದಲ್ಲಿ ಕೋರಿದ್ದಾರೆ.

## ಈ ವಾರ....

★ ಬ್ಯಾಂಕ್ ಉದ್ದಿಮೆಯಲ್ಲಿನ ಕಂಪ್ಯೂಟರೀಕರಣದಿಂದಾಗಿ ಸುಮಾರು ಕಾಲಂಶದಷ್ಟು (ಒಂದೂ ಕಾಲು ಲಕ್ಷ) ನೌಕರರಿಗೆ ಕೆಲಸವಿಲ್ಲದಂತಾಗುತ್ತಿದ್ದು ಅವರಿಗೆ "ಸುವರ್ಣ ಹಸ್ತ ಲಾಘವ" ದ ಯೋಜನೆ ತಯಾರಾಗುತ್ತಿದೆ.

-ಬಿಸಿನೆಸ್ ಸ್ಟಾಂಡರ್ಡ್ ಸುದ್ದಿ, ಫೆ. 14

★ ಸರ್ಕಾರೇ ಸಮಾರಂಭ-ಸಮ್ಮೇಳನಗಳನ್ನು ಬಿಟ್ಟರೆ ಆಫ್ರಿಕಾದ ಬಗ್ಗೆ ಸುದ್ದಿಗಳನ್ನು ಮಾಹಿತಿಗಳನ್ನು ನಮ್ಮ ಪತ್ರಿಕೆಗಳು ಪ್ರಕಟಿಸುವುದು ಬಹಳ ಕಮ್ಮಿ. ಸುದ್ದಿಯಲ್ಲಿರುವ ದಕ್ಷಿಣ ಆಫ್ರಿಕಾದ ಕುರಿತು ಕೂಡಾ, ಪ್ರಕಟವಾಗುವ ಅಲ್ಪ-ಸ್ವಲ್ಪ ಮಾಹಿತಿಗಳು ಕೂಡಾ ಸಾಮಾನ್ಯವಾಗಿ ಪಾಶ್ಚಿಮಾತ್ಯ ಮೂಲಗಳದ್ದು. ಹೆಚ್ಚಾಗಿ ಅವು ಆವೇಶಗಳ ಹಿತಾಸಕ್ತಿ, ಅಭಿಪ್ರಾಯಗಳನ್ನು ಪ್ರತಿಬಿಂಬಿಸುತ್ತವಷ್ಟೆ.

-ಅಬು ಅಬ್ರಹಾಂ, ಸಂಡೇ ಹೆರಾಲ್ಡ್, ಫೆ.15.

★ ಒಂದು ಶತಮಾನಕ್ಕೂ ಹೆಚ್ಚಿನ ಕಾಲ ಜವಳಿ, ಸಣಬು, ಸಕ್ಕರೆ, ಕಲ್ಲಿದ್ದಲು ಇಂತಹ ಉದ್ಯಮಗಳ ಮೇಲೆ ಪೂರ್ಣಸ್ವಾಮ್ಯ ಪಡೆದಿದ್ದ ಖಾಸಗೀ ಉದ್ಯಮವಲಯ ಇವೆಲ್ಲವನ್ನೂ ರೋಗಗ್ರಸ್ತವನ್ನಾಗಿ ಮಾಡಿದ್ದನ್ನು ಯಾರು ಹೇಳುವುದಿಲ್ಲ ಕರ್ನಾಟಕದಲ್ಲೇ ಮೈಸೂರು ಮಿಲ್ಸ್, ಕೃಷ್ಣರಾಜೇಂದ್ರ ಜವಳಿ ಗಿರಣಿ, ಮಹಬೂಬ್‌ಶಾಹಿ ಜವಳಿ ಗಿರಣಿಗಳನ್ನು ರೋಗಗ್ರಸ್ತವನ್ನಾಗಿ ಮಾಡಿ ಸರ್ಕಾರದ ತಲೆಗೆ ಕಟ್ಟಿದವರು ಯಾರು?

-ಕನ್ನಡ ಪ್ರಭ, ಫೆ.16

★ ಅಫ್‌ಘಾನಿಸ್ತಾನ್ ಸರ್ಕಾರದ ರಾಷ್ಟ್ರೀಯ ಹೊಂದಾಣಿಕೆಯ ಪ್ರಯತ್ನಗಳಿಗೆ ಅಡೆತಡೆಗಳು ಬರುತ್ತಿವೆ. ಯಾಕೆಂದರೆ ದಂಗೆಕೋರರ ಚಳುವಳಿಯಲ್ಲಿ ದೇಶವನ್ನು ಮತ್ತೆ ಪಾಳೆಯಗಾರಿಕೆಯತ್ತ ಎಳೆದೊಯ್ಯುವ ದೃಢ ನಿರ್ಧಾರ ಮಾಡಿರುವ ಮೂಲ ಭೂತವಾದಿಗಳ ಪ್ರಾಬಲ್ಯವೇ ಜಾಸ್ತಿ.

-ಡೆಕ್ಕನ್ ಹೆರಾಲ್ಡ್, ಫೆ.18

★ ಈಗಿನ ಚುನಾವಣಾ ವ್ಯವಸ್ಥೆಯಲ್ಲಿ ಅಲ್ಪ ಸಂಖ್ಯೆಯ ಮತದಿಂದ ಬಹುಸಂಖ್ಯೆಯ ಪ್ರತಿನಿಧಿಗಳನ್ನು ಚುನಾಯಿಸುವ ಸಾಧ್ಯತೆ ಜನ ಪ್ರಾತಿನಿಧ್ಯ ಕಲ್ಪನೆಯನ್ನು ವಿಕೃತ ಗೊಳಿಸಿದೆ. ಆದಷ್ಟು ಬೇಗ ಮತದಾರರ ಪ್ರಮಾಣಕನುಗುಣವಾಗಿ ಪ್ರಾತಿನಿಧ್ಯ ಕಲ್ಪಿಸುವ ಪ್ರಶ್ನೆಯನ್ನು ಕೂಲಂಕುಷವಾಗಿ ಪರಿಶೀಲಿಸಬೇಕಾಗುತ್ತದೆ.

-ಪ್ರಜಾವಾಣಿ, ಫೆ.19

## ಅಲ್ಲಲ್ಲಿ ಏನೇನು ?

### ಸಿ. ಐ. ಟಿ. ಯು.

ಸಿ.ಐ.ಟಿ.ಯು. ರಾಜ್ಯ ಕಾರ್ಯಕಾರಿ ಸಮಿತಿ ಹಾಗೂ ರಾಜ್ಯ ಮಂಡಳಿ ಸಭೆಯು ಕ್ರಮವಾಗಿ ಫೆ.20 ಹಾಗೂ 21ಮತ್ತು 22 ರಂದು ಹರಿಹರದಲ್ಲಿ ನಡೆಯಲಿದೆ.

### ಎಸ್. ಎಫ್. ಐ.

ಎಸ್.ಎಫ್.ಐ. ಕೇಂದ್ರ ಕಾರ್ಯಕಾರಿ ಸಮಿತಿಯು ಫೆಬ್ರವರಿ 25 ಮತ್ತು 26ರಂದು ನವದೆಹಲಿಯಲ್ಲಿ ಜರಗುತ್ತಿದೆ.

ಮುಂದಿನ ವಾರ ನಡೆಯಲಿರುವ ಕಾರ್ಯಕ್ರಮಗಳನ್ನು ಎಲ್ಲರಿಗೂ ತಿಳಿಸುವ ಕಾಲಂ ಇದು. ರಾಜ್ಯ ಮಟ್ಟದ, ಜಿಲ್ಲಾಮಟ್ಟದ ಪಕ್ಷ ಸಮಿತಿಗಳ ಸಾಮೂಹಿಕ ಸಂಘಟನೆಗಳ ಸಭೆ, ಹಾಗೂ ಇತರ ಕಾರ್ಯಕ್ರಮಗಳನ್ನು ಒಂದು ವಾರ ಮೊದಲೇ ಕಳುಹಿಸಬೇಕಾಗಿ ವಿನಂತಿ.

ವ್ಯವಸ್ಥಾಪಕರು

# "ರಾಷ್ಟ್ರೀಯ ಸರಿಹೊಂದಾಣಿಕೆ" - ಅಫಘಾನ್ ಕ್ರಾಂತಿಯ ಹೊಸ ಹೆಜ್ಜೆ

ಅಫ್‌ಘಾನಿಸ್ತಾನದ ಏಪ್ರಿಲ್ ಕ್ರಾಂತಿಯ ವಿರುದ್ಧ ಏಳು ವರ್ಷಗಳ ಹಿಂದೆ ಸಾಮ್ರಾಜ್ಯಶಾಹಿಗಳು ಹೇರಿದ ಅಘೋಷಿತ ಯುದ್ಧದಲ್ಲಿ ಅಫ್‌ಘಾನಿ ಜನವಾದಿ ಗಣತಂತ್ರ ಏಕಪಕ್ಷೀಯವಾಗಿ ಕದನ ವಿರಾಮ ಘೋಷಿಸಿದೆ. ಉಭಯ ಪಕ್ಷಗಳು ಪರಿಪಾಲಿಸಿದರೆ ಇದು ಜನವರಿ 15 ರಿಂದ ಆರು ತಿಂಗಳ ಕಾಲ ಜಾರಿಯಲ್ಲಿರುತ್ತದೆ. ಜನವರಿ 15 ರಿಂದ ಅಫ್‌ಘಾನ್ ಸರಕಾರದ ಸೇನೆಗಳು ತಮ್ಮ ಕಾಯಂ ಸ್ಥಾನಗಳಿಗೆ ಮರಳುತ್ತವೆ. ಜನತೆಗೆ ಬೆದರಿಕೆ ಇಲ್ಲದಿದ್ದರೆ ಫಿರಂಗಿ ಹಾಗೂ ವಿಮಾನದಾಳಿಗಳನ್ನು ನಿಲ್ಲಿಸಲಾಗುವುದು. ಇದಕ್ಕೆ ಪ್ರತಿಯಾಗಿ ಸರಕಾರದ ವಿರೋಧಿಗಳು ನಗರಗಳು, ಗ್ರಾಮಗಳು, ಕೈಗಾರಿಕೆಗಳು, ಹಾಗೂ ಸಾಗಾಣಿಕೆಯ ಮೇಲೆ ಯಾವುದೇ ರೀತಿಯ ದಾಳಿಯನ್ನು ಅಫ್‌ಘಾನಿ ಪ್ರದೇಶದಲ್ಲಿ ಶಸ್ತ್ರಾಸ್ತ್ರ ಸಂಗ್ರಹ ಹಾಗೂ ಗಸ್ತಿಗಳಲ್ಲಿ ಸಿಡಿಗುಂಡು ಇರಿಸುವುದನ್ನು ಹಾಗೂ ಗುಪ್ತವಾಗಿ ವಿದೇಶಿ ಪತ್ರಕರ್ತರನ್ನು ತರವುದನ್ನು ನಿಲ್ಲಿಸಬೇಕು ಎಂದು ಸರ್ಕಾರ ಕೇಳಿಕೊಂಡಿದೆ.

ಈ ಸಂದರ್ಭದಲ್ಲಿ ಅಫ್‌ಘಾನಿ ಕ್ರಾಂತಿಕಾರಿ ಮಂಡಳಿ ಹೊರಡಿಸಿರುವ "ರಾಷ್ಟ್ರೀಯ ಸರಿ ಹೊಂದಾಣಿಕೆಯ ಘೋಷಣೆ" ಒಂದು ಚಾರಿತ್ರಿಕವಾದ ಹಾಗೂ ಅಭೂತ ಪೂರ್ವ ಯೋಜನೆ ಕದನವಿರಾಮವಲ್ಲದೆ ಈ ಸಮಗ್ರ ಯೋಜನೆಯ ಇತರ ಮುಖ್ಯ ಅಂಶಗಳು ಹೀಗಿವೆ –

★ ದೇಶದ ಸದ್ಯದ ಹಾಗೂ ಭವಿಷ್ಯದ ಪ್ರಶ್ನೆಗಳ ಪರಿಹಾರದಲ್ಲಿ ಸಶಸ್ತ್ರ ಹೋರಾಟ ಹಾಗೂ ರಕ್ತಪಾತ ನಡೆಯದಂತೆ ಮಾಡುವುದು.

★ ಯುದ್ಧದ ಗಾಯಗಳನ್ನು ಗುಣಪಡಿಸಿ ದೇಶವನ್ನು ಮುಂದುವರಿಯುವ ಪ್ರಯತ್ನದಲ್ಲಿ ಭಾಗವಹಿಸಲು ಇಷ್ಟಪಡುವ ಮಾಜೀ ಶತ್ರುಗಳಿಗೂ ಸಾಮೂಹಿಕ ಕ್ಷಮಾದಾನ.

★ ರಾಜಕೀಯ ಹಾಗೂ ಆರ್ಥಿಕ ಜೀವನದಲ್ಲಿ ಎಲ್ಲಾ ಜನವಿಭಾಗಗಳಿಗೆ ಸಂಯೋಗ್ಯ ಪ್ರಾತಿನಿಧ್ಯ.

★ ಇಸ್ಲಾಮ್ ಧರ್ಮಕ್ಕೆ ಗೌರವ.

★ ಪಾಕಿಸ್ಥಾನ ಇರಾನ್‌ಗಳಲ್ಲಿರುವ ಅಫ್‌ಘಾನ್ ನಿರಾಶ್ರಿತರಿಗೆ ಹಿಂದಿರುಗಲು ವ್ಯವಸ್ಥೆ.

* ಸೋವಿಯತ್ ಸೇನೆಗಳು ಮರಳಲು ಸೂಕ್ತ ವಾತಾವರಣ ನಿರ್ಮಿಸುವುದು.

ಅಫಘಾನಿಸ್ಥಾನದ ಎಲ್ಲಾ ಬುಡಕಟ್ಟುಗಳಿಗೆ, ದೇಶೀ ಗುಂಪುಗಳಿಗೆ ಹಾಗೂ ಜನಾಂಗಗಳಿಗೆ ಶಾಂತಿ, ವಿನಾಶಕಾರೀ ಅಂತರ್ಯುದ್ಧಕ್ಕೆ, ಜನತೆಯ ವಿರುದ್ಧ ಕ್ರಾಂತಿ–ವಿರೋಧಿ ಪಿತೂರಿಗಳಿಗೆ, ಎಲ್ಲಾ ರೀತಿಯ ರಕ್ತಪಾತಕ್ಕೆ, ಕೊನೆ ಹಾಗೂ ತನ್ಮೂಲಕ ಜನತೆಗೆ ಸಂತೋಷ, ಪ್ರಗತಿ, ಸಂಪತಭಿವೃದ್ಧಿ ಈ ಸಮಗ್ರ ಯೋಜನೆಯ ಉದ್ದೇಶ ಇದಕ್ಕಾಗಿ ಪುಶ್ತು ಬುಡಕಟ್ಟು ಜನಗಳನ್ನು ಈ ಪ್ರಕ್ರಿಯೆಯಲ್ಲಿ ಒಳಗೊಳ್ಳಲು ಹಾಗೂ ರಾಜಿಗೆ ಪ್ರಯತ್ನಿಸಲು ಸಿದ್ಧವಿರುವ ವಿರೋಧಿ ರಾಜಕೀಯ ಶಕ್ತಿಗಳೊಂದಿಗೆ ಮಾತುಕತೆ ನಡೆಸಲು ಪ್ರಯತ್ನಿಸಲು ಸರ್ವಪ್ರಯತ್ನ ನಡೆಸಲಾಗುವುದು. ಈಗಾಗಲೇ ಆರಂಭವಾಗಿರುವ ಮಾತುಕತೆಗಳಿಂದ ಅಂತಿಮವಾಗಿ ಈ ಶಕ್ತಿಗಳು ಸ್ಥಳೀಯ ಸ್ವಯಮಾಡಳಿತದಲ್ಲಿ ಪಾಲುಗೊಳ್ಳಲು ಅನುವಾಗಬೇಕು. ಕ್ರಾಂತಿಯ ಹಿಂದಿನ ಸರ್ಕಾರಗಳ ಪ್ರಮುಖ ವ್ಯಕ್ತಿಗಳೊಂದಿಗೆ, ಸ್ವತಂತ್ರ ನಿಲುವಿನ "ಇಸ್ಲಾಮೀ ಪಕ್ಷ" ಗಳೊಂದಿಗೆ ವಿಶೇಷವಾಗಿ ಸಂಪರ್ಕ ಸಾಧಿಸಲಾಗುವುದು ಎಂದು ಈ ಹೊಸ ನೀತಿಯ ಉದ್ದೇಶಗಳನ್ನು ವಿವರಿಸುತ್ತಾ ಅಫಘಾನ್ ಜನತಾ ಪ್ರಜಾ ಪ್ರಭುತ್ವವಾದಿ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಮಹಮ್ಮದ್ ನಜೀಬ್ ಹೇಳಿದ್ದಾರೆ. ಸದ್ಯದ ಘಟ್ಟದಲ್ಲಿ ರಾಜಪ್ರಭುತ್ವವಾದಿಗಳು ಕೂಡಾ ಸೇರಿದಂತೆ ಇಂತಹ ಗುಂಪುಗಳೊಂದಿಗೆ ಸಮ್ಮಿಶ್ರ ಸರ್ಕಾರವೊಂದರರಚನೆಗೆ ಕೂಡಾ ಈ ಪ್ರಕ್ರಿಯೆಯಲ್ಲಿ ಅವಕಾಶವಿದೆ ಎಂದು ಕಾಮ್ರೇಡ್ ನಜೀಬ್ ನುಡಿದಿದ್ದಾರೆ.

ರಾಷ್ಟ್ರೀಯ ಸರಿ ಹೊಂದಾಣಿಕೆಯನ್ನು ಪೂರ್ಣವಾಗಿ ಜ್ಯಾರಿಗೆ ತರಲು ರಾಷ್ಟ್ರ ಮಟ್ಟದಿಂದ ಹಳ್ಳಿಯವರೆಗೂ ಪ್ರತಿ ಹಂತದಲ್ಲಿ ವಿಶಿಷ್ಟ ಅಧಿಕಾರಗಳನ್ನು ಪಡೆದ ವಿಶೇಷ ಆಯೋಗಗಳನ್ನು ರಚಿಸಲಾಗುವುದು. ಜಮೀನು ಹಾಗೂ ನೀರಿನ ವಿವಾದಗಳ ಪರಿಹಾರ ಮತ್ತು ಸುಧಾರಣೆ. ಇತ್ಯಾದಿ ವ್ಯಾಪಕ ಅಧಿಕಾರಗಳು ಈ ಆಯೋಗಗಳಲ್ಲಿವೆ. ರಾಷ್ಟ್ರೀಯ ಮಟ್ಟದಲ್ಲಿ ಆದಾಗಲೇ ಧಾರ್ಮಿಕ ಕಾರ್ಯಕರ್ತರುಮಾಜೀಸೆನೆಟರುಗಳು, ಡೆಪ್ಯುಟಿಗಳು, ಬುಡಕಟ್ಟು ಮುಖಂಡರು ಹಾಗೂ ಇತರ ಜನ ವಿಭಾಗಗಳ 277 ಪ್ರತಿನಿಧಿಗಳನ್ನೊಳಗೊಂಡ "ರಾಷ್ಟ್ರೀಯ ಸರಿಹೊಂದಾಣಿಕೆಯ ಸರ್ವೋಚ್ಚ ವಿಶೇಷ ಆಯೋಗ" ಸ್ಥಾಪನೆಗೊಂಡಿದು ಇದು ತನ್ನ ಪ್ರಥಮ ಸಭೆಯಲ್ಲಿ ಅಂಗೀಕರಿಸಿದ ಈ ಯೋಜನೆಯ ವಿಚಾರ ಹಾಗೂ ಉದ್ದೇಶವನ್ನು ವಿವರಿಸುವ ಸಂದೇಶಗಳನ್ನು ಪಾಕಿಸ್ತಾನ, ಇರಾನ್, ಚೀಣಾ ಹಾಗೂ ಭಾರತದ ಮುಖಂಡರಿಗೆ, ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಿಗೆ, ಅಲಿಪ್ತ ಆಂದೋಲನದ ಅಧ್ಯಕ್ಷರಿಗೆ ಹಾಗೂ ಇಸ್ಲಾಮಿಕ್ ಸಮ್ಮೇಳನ ಸಂಘಟನೆಗೆ ಕಳುಹಿಸಿವೆ.

ಅಫಘಾನ ಸರ್ಕಾರದ ಈ ಹೊಸ ನಿಲುವು ತಳೆಯಲು ಅನುವು ಮಾಡಿಕೊಟ್ಟ ಹಿನ್ನೆಲೆ ಏನು ? 1979ರ ಡಿಸೆಂಬರ್‌ನಲ್ಲಿ, ಕ್ರಾಂತಿ ನಡೆದ ಎರಡು ವರ್ಷಗಳೊಳಗೆ, ಈ ಎಳೆಯ ಜನತಾ ಪ್ರಜಾಪ್ರಭುತ್ವದ ಕತ್ತು ಹಿಸುಕಲು ಅಂತರಾಷ್ಟ್ರೀಯ ಸಾಮ್ರಾಜ್ಯಶಾಹಿಗಳ ಪ್ರಯತ್ನಗಳನ್ನು ಸೋವಿಯತ್ ಸಂಗಾತಿಗಳ ಮಧ್ಯಪ್ರವೇಶದಿಂದ ವಿಫಲಗೊಂಡರೂ ಅಫಘಾನರ ವಿರುದ್ಧ ಸತತ ಒತ್ತಡ ಹಾಕುತ್ತಿರಲು ಈ ಶಕ್ತಿಗಳು ಮಿಲಿಯಗಟ್ಟಲೆ ಡಾಲರುಗಳನ್ನು, ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಸುರಿಯುತ್ತಾ, ಅಫಘಾನ್ ಜನತೆಯ ಮೇಲೆ ಹೇಳತೀರದ ಸಂಕಷ್ಟಗಳನ್ನು ಹೇರುತ್ತಾ ಬಂದಿದ್ದಾರೆ. ಆದರೂ ಅವರ ಪ್ರಯತ್ನಗಳೆಲ್ಲಾ ಒಂದೊಂದಾಗಿ ವಿಫಲಗೊಂಡವು. ತಪ್ಪು ವಿಚಾರಗಳಿಗೆ, ಪಾಶ್ಚಿಮಾತ್ಯ ಅಪಪ್ರಚಾರಕ್ಕೆ ಬಲಿಯಾಗಿ ಕ್ರಾಂತಿಯನ್ನು ವಿರೋಧಿಸಿ ಸಾಮ್ರಾಜ್ಯಶಾಹಿಗಳ ಬಲೆಗೆ ಬಿದ್ದವರಲ್ಲಿ ಹಲವಾರು ಮಂದಿ ತಮ್ಮ ಹೋರಾಟದ ನಿರರ್ಥಕತೆಯನ್ನು ಅರಿಸಿಕೊಳ್ಳಲಾರಂಭಿಸಿದ್ದರು. ಕಳೆದ ಒಂದೇ ವರ್ಷದಲ್ಲಿ 8000 ಇಂತಹ ಕ್ರಾಂತಿ ವಿರೋಧಿ "ದುಷ್ಮನ್" ಗಳು ಅಫಘಾನ್ ಸರ್ಕಾರಕ್ಕೆ ಶರಣಾಗಿದ್ದಾರೆ ಅಲ್ಲದೆ ಈ ಏಳು ವರ್ಷಗಳ ಸಾಮ್ರಾಜ್ಯಶಾಹೀ ಪ್ರೇರಿತ ಯುದ್ಧದ ನಡುವೆಯೂ ಅಫಘಾನ್ ಕ್ರಾಂತಿಯ ಸಾಮಾಜಿಕ ಹಾಗೂ ರಾಜಕೀಯ ಆಧಾರ ವಿಸ್ತರಿಸಿದೆ. ರಾಜಕೀಯ ಸ್ಥಿರತೆ ಬಂದಿದೆ. ಪ್ರಜಾಪ್ರಭುತ್ವೀಕರಣ ವ್ಯಾಪಕಗೊಳ್ಳುತ್ತಿದೆ. 90% ಇರುವ ರೈತರ ಜೀವನ ಪರಿಸ್ಥಿತಿ ಸುಧಾರಿಸಲು ಹಲವಾರು ಕಾರ್ಯಕ್ರಮಗಳನ್ನೂ ಕೈಗೊಳ್ಳಲಾಗಿದೆ. ಕಳೆದ ಮಾರ್ಚ್‌ನಲ್ಲಿ ರಾಷ್ಟ್ರೀಯ ವರಮಾನ 25% ಕೋಟಿ ಉತ್ಪಾದನೆಯಲ್ಲಿ 38% ಹಾಗೂ ಕೃಷಿ ಉತ್ಪಾದನೆಯಲ್ಲಿ 14-16% ಹೆಚ್ಚಳ ತರುವ ಉದ್ದೇಶದ ಪಂಚವಾರ್ಷಿಕ ಯೋಜನೆ ಆರಂಭಗೊಂಡಿದೆ.

ಈ ಹಿನ್ನೆಲೆಯಲ್ಲಿ ಕ್ರಾಂತಿಕಾರೀ ಸರಕಾರದ ಮೂಲಭೂತ ನಿಲುವನ್ನು ಬಿಟ್ಟುಕೊಡದೆ ಶಾಂತಿಯ ಅವ್ಯಾಹತ ಪ್ರಯತ್ನ ದೀರ್ಘ ಯುದ್ಧದಿಂದ ಬೇಸತ್ತ ಜನರಿಗೆ ಅತ್ಯವಶ್ಯ, ಇದಕ್ಕೆ ಒಂದು ಪ್ರಜಾಸತ್ತಾತ್ಮಕವಾದ ಹಾಗೂ ವಾಸ್ತವ ದೃಷ್ಟಿಯ ಹೊಸ ರಾಜಕೀಯ ನಿಲುವು ತಳೆಯಬೇಕೆಂದು ಅಫ್‌ಘಾನಿಸ್ತಾನ ಜನತಾ ಪ್ರಜಾ ಪ್ರಭುತ್ವ ಪಕ್ಷದ ಕೇಂದ್ರ ಸಮಿತಿಗೆ ಸಲ್ಲಿಸಿದ ವರದಿಯಲ್ಲಿ ಕಾಮ್ರೇಡ್ ನಾಜೀಬ್ ಹೇಳಿದ್ದರು.

ಇದಕ್ಕನುಗುಣವಾಗಿ ರೂಪುಗೊಂಡಿರುವ 'ರಾಷ್ಟ್ರೀಯ ಸರಿಹೊಂದಾಣಿಕೆಯ ಘೋಷಣೆ'ಗೆ ಈಗಾಗಲೇ ದೇಶಾದ್ಯಂತ ಉತ್ತಮ ಪ್ರತಿಕ್ರಿಯೆ ದೊರೆತಿದೆ. ಸರ್ಕಾರ ಹಾಗೂ ಕ್ರಾಂತಿಯನ್ನು ಸಶಸ್ತ್ರವಾಗಿ ವಿರೋಧಿಸುತ್ತಿದ್ದ 37,000 ಸದಸ್ಯತ್ವವಿರುವ 417 ಗುಂಪುಗಳೊಂದಿಗೆ ಮಾತುಕತೆ ಆರಂಭವಾಗಿದೆ. 20 ಗುಂಪುಗಳ 10,000 ಮಂದಿ ಕಳೆದ ಒಂದು ತಿಂಗಳಲ್ಲಿ ಸರ್ಕಾರಕ್ಕೆ ಬೆಂಬಲ ಸೂಚಿಸಿದ್ದಾರೆ. ಪಾಕಿಸ್ತಾನ ಹಾಗೂ ಇರಾನ್ ಸರ್ಕಾರಗಳ ಅಡೆತಡೆಗಳಿದ್ದಾಗ್ಯೂ 20,000 ನಿರಾಶ್ರಿತರು ವಾಸವಾಗಿದ್ದಾರೆ. ಐದುವರ್ಷಗಳವರೆಗಿನ ಜೈಲುವಾಸದ ಶಿಕ್ಷೆ ಪಡೆದವರು ಏಳುವರ್ಷಗಳವರೆಗೆ ಶಿಕ್ಷೆ ಪಡೆದು ಈಗಾಗಲೇ ನಾಲ್ಕುವರ್ಷ ಪೂರೈಸಿರುವವರು, ಮಹಿಳಾ ಹಾಗೂ 18 ವರ್ಷಗಳ ಕೆಳಗಿನ ಮತ್ತು 60 ವರ್ಷ ಮೀರಿದ ಕೈದಿಗಳು ಈಗಾಗಲೇ ಕ್ಷಮಾದಾನ ಪಡೆದಿದ್ದಾರೆ. ಈ ಪ್ರಕ್ರಿಯೆಗೆ ಪೂರ್ವಭಾವಿಯಾಗಿ ಅಕ್ಟೋಬರ್ 16 ರಂದೇ ಸಂಕಷ್ಟ ಕಾಲದಲ್ಲಿ ನೆರವಿಗೆ ಬಂದ ಆರು ಸೋವಿಯತ್ ರೆಜಿಮೆಂಟ್‌ಗಳು ಸ್ವದೇಶಕ್ಕೆ ಮರಳುವಂತಾಗಿದೆ. ಸೋವಿಯೆತ್ ಒಕ್ಕೂಟ ಹಾಗೂ ಅಫ್‌ಘಾನ್ ಸರಕಾರಗಳ ಈ ಶಾಂತಿ ಪ್ರಯತ್ನಗಳಿಗೆ ಇದೇ ಫೆಬ್ರವರಿ 5 ರಂದು ಜರಗಲಿರುವ ಜಿನೀವಾ ಮಾತುಕತೆಗಳಲ್ಲಿ ಪಾಕಿಸ್ತಾನ ಹಾಗೂ ಇರಾನ್ ಬುದ್ಧಿಸ್ವಾಗತ ಪ್ರತಿಕ್ರಿಯೆ ತೋರಿಸುತ್ತದೆಯೋ ಎಂಬುದನ್ನು ಜಗತ್ತು ಈಗ ನಿರೀಕ್ಷಿಸುತ್ತಿದೆ.

ಅಫ್‌ಘಾನ್ ಕ್ರಾಂತಿಕಾರಿ ಮಂಡಳಿ ಅನುಸರಿಸುತ್ತಿರುವ ಹೊಸ ನೀತಿಯ ದಾರಿ ಸಂಗಮವಾದುದೇನೂ ಅಲ್ಲ. ಪಾಕಿಸ್ತಾನದಿಂದ ಧಾಳಿ ನಡೆಸುತ್ತಿರುವ ಏಳು ಕ್ರಾಂತಿ ವಿರೋಧಿ ಗುಂಪುಗಳು ಕದನ ವಿರಾಮವನ್ನು ಸ್ವೀಕರಿಸಲು ನಿರಾಕರಿಸಿವೆ. ಅಮೇರಿಕಾ ಹಾಗೂ ಇತರ ಸಾಮ್ರಾಜ್ಯಶಾಹೀ ಶಕ್ತಿಗಳು 'ರಾಷ್ಟ್ರೀಯ ಸರಿ ಹೊಂದಾಣಿಕೆ'ಯಲ್ಲಿ ಸಾಕಷ್ಟು ಅಡೆ ತಡೆಗಳನ್ನು ಹಾಕುವಂತೆ ಈ ಕ್ರಾಂತಿ ವಿರೋಧಿಗಳ ಮೇಲೆ ಒತ್ತಡ ಹಾಕುತ್ತಲೇ ಇದ್ದಾರೆ. ಪಾಕಿಸ್ತಾನ ಹಾಗೂ ಇರಾನ್‌ನಲ್ಲಿರುವ ಅಫ್‌ಘಾನ್ ನಿರಾಶ್ರಿತರನ್ನು ವಿಮಾನ ಮೂಲಕ ವಾಪಾಸು ಕರೆದು ತರಲು ಇನ್ನೂ ಆ ದೇಶಗಳ ಸರಕಾರಗಳು ಅನುಮತಿ ನೀಡಿಲ್ಲ. ಪಾಕಿಸ್ತಾನದಲ್ಲಿರುವ ನಿರಾಶ್ರಿತರ ಶಿಬಿರಗಳಲ್ಲಿ ಮಾತುಕತೆ ನಡೆಸುವುದನ್ನು ಜಿಯಾ ಸರಕಾರ ಪ್ರತಿಬಂಧಿಸಿದೆ. ಇದನ್ನು ಗಮನದಲ್ಲಿಟ್ಟುಕೊಂಡೇ ಕಾಮ್ರೇಡ್ ನಾಜೀಬ್‌ರವರು ರಾಷ್ಟ್ರೀಯ ಸರಿಹೊಂದಾಣಿಕೆಯ ನೀತಿ ಏಕಮುಖ ಪ್ರತಿಕ್ರಿಯೆಯಲ್ಲಿ, ತಮ್ಮ ಶಸ್ತ್ರಾಸ್ತ್ರಗಳನ್ನು ಇನ್ನೂ ಪ್ರಯೋಗಿಸುವವರನ್ನು ಸೂಕ್ತವಾಗಿ ಎದುರಿಸಲಾಗುವುದು ಎಂದು ಎಚ್ಚರಿಸಿದ್ದಾರೆ.

ಅದೇನೇ ಇರಲಿ, ಅಫ್‌ಘಾನ್ ಸರಕಾರದ ಧೋರಣೆಗಳಿಗೆ ಇದುವರೆಗೆ ದೊರೆತಿರುವ ಯಶಸ್ಸು ಆ ದೇಶದ ಪುನರ್ರಚನೆಯ ಪ್ರಕ್ರಿಯೆ ಆರಂಭವಾಗಿರುವುದನ್ನು ತೋರಿಸಿಕೊಟ್ಟಿದೆ.

## "ದುಷ್ಮನ್" ಗಳ ಬೆನ್ನಹಿಂದೆ

ಅಫಘಾನ್ ಕ್ರಾಂತಿಗೆ ಸಶಸ್ತ್ರ ವಿರೋಧ ಆಂತರಿಕ ಮೂಲಗಳಿಂದಾಗಿದ್ದರೆ ಅದು ಬಹಳ ಹಿಂದೇನೇ ಪೂರ್ಣ ಸೋತು ಹೋಗುತ್ತಿತ್ತು. ಕೇವಲ ಅಮೇರಿಕಾವೊಂದೇ ಇತ್ತೀಚಿನ ವರ್ಷಗಳಲ್ಲಿ ಅಫಘಾನ್ ಕ್ರಾಂತಿ ವಿರೋಧಿ "ದುಷ್ಮನ್" ಪಡೆಗಳಿಗೆ ಒಂದೂವರೆ ಶತಕೋಟಿ ಡಾಲರ್ ನೀಡಿದ್ದಾರೆ. ಪಶ್ಚಿಮ ಜರ್ಮನಿ, ಬ್ರಿಟನ್, ಜಪಾನ್ ಹಾಗೂ ಕೆಲವು ಅರಬ್ ದೇಶಗಳು ಪ್ರತಿ ವರ್ಷ ಇನ್ನೂ ಒಂದು ಶತಕೋಟಿ ಡಾಲರುಗಳನ್ನು ಸುರಿಯುತ್ತಿವೆ. ಈ ಪ್ರಸ್ತುತ ಒಂದು ವರ್ಷದಲ್ಲೇ ಸೌದಿ ಅರೇಬಿಯಾ 2705 ಕೋಟಿ ಡಾಲರುಗಳನ್ನು ನೀಡಿದೆ. ಪಾಕಿಸ್ತಾನ ಹಾಗೂ ಇರಾನ್‌ನಲ್ಲಿ ಸುಮಾರು 150 ತರಬೇತಿ ಕ್ಯಾಂಪುಗಳಲ್ಲಿ ಈ "ದುಷ್ಮನ್" ಗಳಿಗೆ ಮಿಲಿಟರಿ ತರಬೇತಿ ಹಾಗೂ ಸ್ಟಿಂಗರ್ ಮುಂತಾದ ಅತ್ಯಾಧುನಿಕ ಅಸ್ತ್ರಗಳನ್ನು ನೀಡಲಾಗುತ್ತಿದೆ. ಒಬ್ಬ ಅಫಘಾನನನ್ನು ಕೊಂದರೆ 100–150ಡಾಲರ್, ಪಾರ್ಟಿ ಕಾರ್ಯಕರ್ತನನ್ನು ಕೊಂದರೆ 200-300 ಡಾಲರ್, ಅಧಿಕಾರಿಯನ್ನು ಕೊಂದರೆ 600 ಡಾಲರ್, ಟ್ಯಾಂಕನ್ನು ನಾಶಪಡಿಸಿದರೆ 2000 ಡಾಲರ್ ಹೀಗೆ ಈ "ದುಷ್ಮನ್" ಗಳಿಗೆ ಸಂಭಾವನೆ ನೀಡಲಾಗುತ್ತಿದೆ. ಜತೆಗೆ ಒಟ್ಟು ಸುಮಾರು 300 ಅಮೇರಿಕನ್ ಮಿಲಿಟರಿ ಸಲಹೆಗಾರರು ಹಾಗೂ ಇಷ್ಟೇ ಸಂಖ್ಯೆಯ ಬ್ರಿಟಿಷ್ ಫ್ರೆಂಚ್, ಪಾಕಿಸ್ತಾನಿ, ಇರಾನ್ ಹಾಗೂ ಸೌದಿ ಸಲಹೆಗಾರರ ನಿರ್ದೇಶನ ಈ "ದುಷ್ಮನ್" ಗಳಿಗಿವೆ.

**ಅಫಘಾನಿಸ್ತಾನದ ಸವುರ್ ಕ್ರಾಂತಿ "ದುಷ್ಮನ್"ಗಳ, ಅವರ ಸಾಮ್ರಾಜ್ಯಶಾಹಿ ಪ್ರಭುಗಳ ಪಿತೂರಿಗಳನ್ನೆಲ್ಲಾ ಪೂರ್ಣವಾಗಿ ಸೋಲಿಸಿ ಆತ್ಮಸ್ಥೈರ್ಯದಿಂದ ಮುನ್ನಡೆಯುತ್ತಿದೆ. ಇತ್ತೀಚೆಗೆ ಏಕಪಕ್ಷೀಯವಾಗಿ ಕದನ ವಿರಾಮ ಘೋಷಿಸಿದೆ. ಪುನರ್ರಚನೆಯ ಹೊಸ ಪ್ರಕ್ರಿಯೆ ಹೇಗೆ ಆರಂಭವಾಗಿದೆ ? ಇದು ಹೇಗೆ ಸಾಧ್ಯವಾಯಿತು ? ಇಲ್ಲಿ ಓದಿ.**

★★★★★★★★★★★★★★★★



★★★★★★★★★★★★★★★★

# ವಿಸ್ತಾರಗೊಂಡ ಕ್ರಾಂತಿಯ ಸಾಮೂಹಿಕ ನೆಲೆ

ಪೀಪಲ್ಸ್ ಡೆಮೊಕ್ರಟಿಕ್ ಪಾರ್ಟಿ ಆಫ್ ಅಫ್‌ಘಾನಿಸ್ತಾನ್‌ನ (ಪಿ.ಡಿ.ಪಿ.ಎ) ಇಪ್ಪತ್ತನೇ ಸ್ಥಾಪನಾ ಅಧಿವೇಶನದಲ್ಲಿ ಈ ಪಕ್ಷದ ಕೇಂದ್ರ ಸಮಿತಿ ಅಂಗೀಕರಿಸಿದ ನಿರ್ಣಯದಲ್ಲಿ ಪಕ್ಷದ ಕಾರ್ಯಕರ್ತರಿಗೆ ಈ ಕೆಳಗಿನ ಕರೆ ನೀಡಲಾಗಿತ್ತು. 'ಜನತೆಗೆ ತೀರಾ ಹತ್ತಿರವಾಗಿರಿ, ಜನಸಮುದಾಯದ ನಡುವೆ ದುಡಿಯಿರಿ, ಎಲ್ಲೆಲ್ಲೂ ಮತ್ತು ಯಾವಾಗಲೂ ಜನರಿಗೆ ನಿಕಟವಾಗಿರಿ, ಅಫ್‌ಘಾನ್ ಕ್ರಾಂತಿಗೆ ಶತ್ರುಗಳಾಗಿರುವವರನ್ನು ನಿರ್ಮೂಲಗೊಳಿಸಲು ಪಕ್ಷ ಮತ್ತು ಸರಕಾರಕ್ಕೆ ನೆರವು ನೀಡಬೇಕಾದುದು ಎಲ್ಲ ದೇಶಪ್ರೇಮಿಗಳ ಪಾಲಿಗೆ ಅಗತ್ಯವೆನ್ನುವುದನ್ನು ಜನತೆಗೆ ತಿಳಿಯಪಡಿಸಿರಿ' ಎನ್ನಲಾಗಿತ್ತು.

ಈ ಕರೆಯನ್ನು ಕಾರ್ಯರೂಪಕ್ಕೆ ತರಲು ಪಿ.ಡಿ.ಪಿ.ಎ. ಅಫ್‌ಘಾನಿಸ್ತಾನಕ್ಕೇ ವಿಶಿಷ್ಟವಾಗಿರುವ ಜನಸಮೂಹದ ವೇದಿಕೆಯೊಂದನ್ನು ಪರಿಣಾಮಕಾರಿಯಾಗಿ ಬಳಸಿಕೊಂಡಿತು. ಈ ವೇದಿಕೆಯೇ ಅಫ್‌ಘಾನಿಸ್ತಾನದ 'ಜಿರ್ಗಾ'ಗಳು ಸಾಮಾಜಿಕ ಜೀವನವನ್ನು ಜನ ಕ್ರಾಂತೀಕರಣಗೊಳಿಸುವಲ್ಲಿ ಮತ್ತು ಆಡಳಿತೆಯನ್ನು ಹಳ್ಳಿಗಳ ಮಟ್ಟಕ್ಕೆ ವಿಕೇಂದ್ರೀಕರಣಗೊಳಿಸಿ ಕ್ರಾಂತಿಯ ಯಶಸ್ಸಿನಲ್ಲಿ ಜನಸಮುದಾಯದ ಭಾಗವಹಿಸುವಿಕೆಯನ್ನು ಹೆಚ್ಚಿಸಲು 'ಜಿರ್ಗಾ'ಗಳು ತುಂಬಾ ನೆರವಾಗಿವೆ.

## ಜಿರ್ಗಾಗಳೆಂದರೇನು?

ಅಫ್‌ಘಾನಿಸ್ತಾನದ ಕಳೆದ ಐದು ಸಾವಿರ ವರ್ಷಗಳ ಇತಿಹಾಸದಲ್ಲಿ ದೇಶದ ಆಂತರಿಕ ಮತ್ತು ಬಾಹ್ಯ ಸಮಸ್ಯೆಗಳನ್ನು ಎದುರಿಸುವಲ್ಲಿ ಜಿರ್ಗಾಗಳು ವಹಿಸಿದ ಪಾತ್ರ ಅತ್ಯಂತ ಮಹತ್ವದ್ದು. 'ಜಿರ್ಗಾ' ಎಂದರೆ ಜನಸಾಮಾನ್ಯರು ಬೇರೆ ಬೇರೆ ಹಂತದಲ್ಲಿ ಆರಿಸಿರುವ ಪ್ರತಿನಿಧಿಗಳ ಸಮಾವೇಶ ಅಥವಾ ನೆರವಿ. ಈ ನೆರವಿಗಳಲ್ಲಿ ಆಯ್ಕೆಯಾದ ಪ್ರತಿನಿಧಿಗಳಲ್ಲದೆ ಒಮ್ಮೊಮ್ಮೆ ಇತರರೂ ಭಾಗವಹಿಸಬಹುದು. ಜಿರ್ಗಾಗಳ ಸಭೆ ಎಲ್ಲರಿಗೂ ಕಾಣಿಸಿಕೊಳ್ಳುವ ಸ್ಥಳವೊಂದರಲ್ಲಿ ನಡೆಯುತ್ತದೆ. ಇವುಗಳ ಕಾರ್ಯಕಲಾಪಗಳಿಗೆ ಅಡ್ಡಿಯುಂಟುಮಾಡುವುದು ಶಿಕ್ಷಾರ್ಹ ಅಪರಾಧವೆನಿಸುತ್ತದೆ ಜಿರ್ಗಾಗಳ ತೀರ್ಮಾನ ಆಯಾಯ ಬುಡಕಟ್ಟಿನ ಜನಗಳಿಗೆ ಅನ್ವಯಿಸುತ್ತದೆ ಮತ್ತು ಅದನ್ನು ಕಡ್ಡಾಯವಾಗಿ ಪಾಲಿಸಬೇಕು. ಸಂಪ್ರದಾಯದಂತೆ ಜಿರ್ಗಾಗಳ ತೀರ್ಮಾನವನ್ನು ಅನುಷ್ಠಾನಕ್ಕೆ ತರುವೆವೆಂದು ಅದರಲ್ಲಿ ಪಾಲುಗೊಂಡ ಎಲ್ಲರೂ ಉಪ್ಪು, ಖಡ್ಗ ಮತ್ತು ಖುರಾನಿನ ಮೇಲೆ ಆಣೆಯಿಟ್ಟು ಘೋಷಿಸುತ್ತಾರೆ.

ಜಿರ್ಗಾಗಳಲ್ಲಿ ಎರಡುವಿಧ. 'ಸ್ಥಳೀಯ ಜಿರ್ಗಾ'ಗಳು ನಿರ್ದಿಷ್ಟ ಹಳ್ಳಿ, ಪ್ರದೇಶ ಅಥವಾ ಬುಡಕಟ್ಟಿನ ಜನರ ಕೂಟಗಳು. ಇವು ಸ್ಥಳೀಯ ಸಮಸ್ಯೆ ಮತ್ತು ವಿವಾದಗಳ ಪ್ರಶ್ನೆಯಲ್ಲಿ ತೀರ್ಮಾನ ಕೈಗೊಳ್ಳುತ್ತವೆ. 'ಲೋಯಾ ಜಿರ್ಗಾ' ಅಥವಾ ಸಾರ್ವತ್ರಿಕ ನೆರವಿಯೆಂದರೆ ಎಲ್ಲ ಸ್ಥಳೀಯ ಜಿರ್ಗಾಗಳ ಪ್ರತಿನಿಧಿಗಳು ಮತ್ತು ಸರಕಾರದ ಪ್ರತಿನಿಧಿಗಳನ್ನೊಳಗೊಂಡ ಉನ್ನತ ಮಟ್ಟದ ನೆರವಿ. ಇದು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಹತ್ವವುಳ್ಳ ತೀರ್ಮಾನಗಳನ್ನು ಕೈಗೊಳ್ಳುತ್ತದೆ. ದೇಶವು ಅತ್ಯಂತ ಕಠಿಣವಾದ ಮತ್ತು ಮುಖ್ಯವಾದ ಸಮಸ್ಯೆಗಳನ್ನು ಎದುರಿಸುತ್ತಿರುವಾಗ ಇಂತಹ ಲೋಯಾ ಜಿರ್ಗಾಗಳ ಸಮಾವೇಶವನ್ನು ಏರ್ಪಡಿಸಲಾಗುತ್ತದೆ ಮತ್ತು ಅವು ದೇಶದ ಆಂತರಿಕ ಮತ್ತು ವಿದೇಶೀ ಧೋರಣೆಯನ್ನೊಳಗೊಂಡು ಬಹು ಮುಖ್ಯವಾದ ತೀರ್ಮಾನ ಕೈಗೊಳ್ಳುತ್ತದೆ. ಇಂತಹ ಲೋಯಾ ಜಿರ್ಗಾಗಳ ತಮ್ಮ ಸಾಮೂಹಿಕ ಸ್ವರೂಪದಲ್ಲಿ 'ರಾಷ್ಟ್ರೀಯ ಅಭಿಮತ ಸಂಗ್ರಹ' ವನ್ನು ಹೆಚ್ಚು ಕಡಿಮೆ ಹೋಲುತ್ತವಾದರೂ ಅವುಗಳ ತೀರ್ಮಾನಕ್ಕೆ ಕಾನೂನಿನ ಮತ್ತು ಶಾಸನದ ಸ್ವರೂಪವಿದೆ. ಲೋಯಾ ಜಿರ್ಗಾಗಳು ಪ್ರಜಾಪ್ರಭುತ್ವದ ಅತ್ಯುನ್ನತ ಮೌಲ್ಯ ಹಾಗೂ ಜನಸಮುದಾಯದ ಇಚ್ಛಾಶಕ್ತಿಯನ್ನು ಪ್ರತಿನಿಧಿಸುತ್ತವೆ.

## ಜನತೆಯ ಕೈಗೆ ಅಧಿಕಾರ

ಜಿರ್ಗಾಗಳ ಇತಿಹಾಸ ಆರ್ಯರ ಕಾಲದಷ್ಟು ಹಿಂದಿನದು. ಕ್ರಿಸ್ತಪೂರ್ವ ಎರಡನೇ ಮತ್ತು ಒಂದನೇ ಶತಮಾನದಲ್ಲೂ 'ಸಭಾ' ಮತ್ತು 'ಸಮಿತಿ' ಗಳೆಂಬ ಜಿರ್ಗಾಗಳಿದ್ದುವೆಂದು ಹೇಳಲಾಗಿದೆ. ಋಗ್ವೇದ ಕಾಲದಲ್ಲಿ ಇಂತಹ 'ಸಮಿತಿ'ಗಳು ನಡೆದಿದ್ದುವೆಂದೂ ಅವುಗಳಲ್ಲಿ ಹೆಂಗಸರೂ ಸೇರಿದಂತೆ ಸಮಾಜದ ಎಲ್ಲಾ ಪ್ರಮುಖರು ಭಾಗವಹಿಸಿ ಇಡೀ ಸಮಾಜದ ಒಳಿತಿಗಾಗಿ ತೀರ್ಮಾನಗಳನ್ನು ಕೈಗೊಳ್ಳುತ್ತಿದ್ದರು. ಇಂತಹ 'ಸಮಿತಿ'ಗಳಲ್ಲೂ ರಾಜನನ್ನು ಚುನಾಯಿಸಲಾಗುತಿತ್ತು. ಕುಶಾನರ ರಾಜ ಕನಿಷ್ಕನ ಕಾಲದಲ್ಲಿ (ಕ್ರಿ.ಶ. 120-160) ಇಂತಹ ನೆರವಿ ನಡೆದಿತ್ತು. ಹತ್ತೊಂಭತ್ತನೇ ಶತಮಾನದಲ್ಲಿ ಒಟ್ಟು ಹತ್ತು ಬಾರಿ 'ಲೋಯಾ' ಜಿರ್ಗಾಗಳನ್ನು ಏರ್ಪಡಿಸಲಾಗಿತ್ತು. ಅಫ್‌ಘಾನಿಸ್ತಾನದ ರಾಜ ಅಮಾನುಲ್ಲಾ ಜಾನನ ಆಳ್ವಿಕೆಯಲ್ಲಿ 1922, 1924 ಮತ್ತು 1918ರಲ್ಲಿ ಲೋಯಾ ಜಿರ್ಗಾಗಳು ನಡೆದಿದ್ದುವು. ಸ್ವತಂತ್ರ

[6ನೇ ಪುಟನೋಡಿ]

> ನಮ್ಮ ಕ್ರಾಂತಿಯ ಅಸ್ತಿತ್ವ, ನಮ್ಮ ನಾಡಿನ ಘನತೆ, ಸಾರ್ವಭೌಮತ್ವ ಗಾಂಭೀರ ಸಂಕಷ್ಟದಲ್ಲಿದ್ದ ಆ ಕರಾಳ ದಿನಗಳಲ್ಲಿ ನೀವು ನಮ್ಮ ನೆರವಿಗೆ ಬಂದಿರಿ. ಲೆನಿನ್ನರ ನಾಡಿನವೀರ ಪುತ್ರರೇ ಎಪ್ರಿಲ್ ಕ್ರಾಂತಿಗೆ, ಅಫಘಾನ್ ಜನತೆಗೆ ನೀವು ಮಾಡಿದ ಉಪಕಾರಕ್ಕೆ ನಾವು ಸದಾ ಕೃತಜ್ಞತೆಯಿಂದ ತಲೆಬಾಗುತ್ತೇವೆ. ಹಿಮಾಚ್ಛಾದಿತ ಶಿಖರಗಳು, ಹಸಿರು ಕಣಿವೆಗಳು, ಪಟ್ಟಣಗಳು, ಹಳ್ಳಿಗರು ಪ್ರತಿಯೊಂಂದು ಅಫಘಾನ್ ಮನೆ ನಿಮಗೆ ವಿದಾಯ ಹೇಳುತ್ತಿವೆ. ನಿಮ್ಮ ಧೈರ್ಯ, ಶೌರ್ಯ, ಸಹೃದಯತೆ ಹಾಗೂ ಮಾನವೀಯತೆಯ ಗಾಥೆಗಳು ದಂತಕತೆಗಳಾಗಿ ನಮ್ಮ ಜನರ ಮನಸ್ಸಿನಲ್ಲಿ ಅಜರಾಮರವಾಗುತ್ತವೆ.
>
> —ಅಕ್ಟೋಬರ್ 15, 1986 ರಂದು ಸ್ವದೇಶಕ್ಕೆ ಮರಳಲು ಸಿದ್ಧವಾಗಿ ನಿಂತ ಪ್ರಥಮ ಸೋವಿಯತ್ ಟ್ಯಾಂಕ್ ರೆಜಿಮೆಂಡ್‌ಗೆ ವಿದಾಯ ನೀಡುತ್ತಾ ಕಾಂ. ನಜೀಬ್.

---

# ಇಸ್ಲಾಂ ಮತ್ತು ಸಮಾಜವಾದ

> **ಕಳೆದ ಐದು ವರ್ಷಗಳಲ್ಲಿ ಅಫಘಾನಿಸ್ತಾನದ ಕ್ರಾಂತಿಕಾರೀ ಸರ್ಕಾರ 231 ಮಸಿದೆಗಳನ್ನು ಕಟ್ಟಿದೆ, 1026 ಮಸೀದೆಗಳನ್ನು ದುರಸ್ತಿ ಮಾಡಿದೆ. ಒಟ್ಟು 27 ಕೋಟಿ ಅಫ್ಘಾನೀ ಮೊತ್ತ ಖರ್ಚು ಮಾಡಿದೆ. ಇದೇ ಅವಧಿಯಲ್ಲಿ "ಧರ್ಮಕ್ಕಾಗಿ ಹೋರಾಡುವವರು" ಎನಿಸಿಕೊಂಡ ಕ್ರಾಂತಿ-ವಿರೋಧಿ "ದುಷ್ಮನ್" ಗಳು 254 ಮಸೀದೆಗಳನ್ನು ಹಾಳುಗೆಡವಿದರು !**

ಅಫ್‌ಘಾನಿಸ್ತಾನದಲ್ಲಿ ಇಸ್ಲಾಂನ್ನು ಅಧಿಕೃತ ಧರ್ಮವಾಗಿ ಘೋಷಿಸಲಾಗಿದೆ. ಮುಲ್ಲಾಗಳಿಗೆ ಸರಕಾರ ಸಂಬಳ ನೀಡುತ್ತಿದೆ. ಇಸ್ಲಾಂ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುತ್ತಿದೆ. ಹಲವು ವಿಶ್ವವಿದ್ಯಾಲಯಗಳಲ್ಲಿ ಇಸ್ಲಾಂ ಅಧ್ಯಯನ ಕೇಂದ್ರಗಳನ್ನು ತೆರೆದಿದೆ. ಹಲವು ಮಸೀದಿಗಳನ್ನು ರಿಪೇರಿ ಮಾಡಲಾಗಿದೆ. ಕೆಲವು ಹೊಸ ಮಸೀದಿಗಳನ್ನು ಕಟ್ಟಲಾಗಿದೆ.

ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿರುವ ಕ್ರಾಂತಿಕಾರಿ ಸಮಿತಿಯ ಸರಕಾರ ಇವೆಲ್ಲವನ್ನು ಏಕೆ ಮಾಡುತ್ತಿದೆ? ಇದು ಭಯೋತ್ಪಾದಕ ಗುಂಪುಗಳು ಇಸ್ಲಾಂನ ಹೆಸರಿನಲ್ಲಿ ಎಪ್ರಿಲ್‌ನ ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ವಿರೋಧಿಸುವುದನ್ನು ಎದುರಿಸುವುದಕ್ಕಾಗಿ ತಾತ್ಕಾಲಿಕವಾದ ಪ್ರತಿ ತಂತ್ರವೇ? ಅಫ್‌ಘಾನಿಸ್ತಾನದ ಚರಿತ್ರೆಯಲ್ಲಿ ಧರ್ಮದ ವಿಶಿಷ್ಟ ಪಾತ್ರವನ್ನು ಜಾಗ್ರತೆಯಿಂದ ಪರಿಶೀಲಿಸಿದರೆ ಇದು ಬರಿಯ ತಂತ್ರವಲ್ಲ. ಬದಲಾಗಿ ಪ್ರಜಾಸತ್ತಾತ್ಮಕ ಕ್ರಾಂತಿಯ ಬುನಾದಿಯನ್ನು ವ್ಯಾಪಕಗೊಳಿಸುವ ನೀತಿಯುತ ಕ್ರಮ. ಇದು "ಜಿರ್ಗಾ" ಎಂದು ಕರೆಯಲಾಗುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳ ಮೂಲಕ ಕ್ರಾಂತಿಗೆ ವ್ಯಾಪಕ ಜನವಿಭಾಗಗಳ ಬೆಂಬಲ ಖಚಿತಗೊಳಿಸಿದ ಹಿನ್ನೆಲೆಯಲ್ಲಿ ತೆಗೆದುಕೊಂಡ ಕ್ರಮ. ಕ್ರಾಂತಿಯ ಬಲದ ಚಿಹ್ನೆ. ಬಲಹೀನತೆಯ ಸೂಚನೆಯಲ್ಲ ಇದು ಪ್ರಜಾಸತ್ತಾತ್ಮಕ ಕ್ರಮ.

## ಧರ್ಮ ಮತ್ತು ವರ್ಗ ಹೋರಾಟ

ಅಫ್‌ಘಾನಿಸ್ತಾನದಲ್ಲಿ ಶತಮಾನಗಳಿಂದ ಧರ್ಮ, ಮತಗಳ ಸ್ಥಾಪಕರು ರಾಜಕೀಯ ಹೋರಾಟದಲ್ಲಿ ಸಕ್ರಿಯ ಪಾತ್ರ ವಹಿಸಿದ್ದಾರೆ. ಇಸ್ಲಾಂ ಅಫ್‌ಘಾನಿಸ್ತಾನಕ್ಕೆ 8ನೇ ಶತಮಾನದಲ್ಲಿ ಅರಬ್ ದಿಗ್ವಿಜಯದೊಂದಿಗೆ ಬಂದಿತು. ಸಣ್ಣ ಸಣ್ಣ ಸಂಸ್ಥಾನಗಳಲ್ಲಿ ಹರಿಹಂಚಾಗಿದ್ದ ದೇಶವನ್ನು ಪಾಳೆಯಗಾರಿ ರಾಜ್ಯವನ್ನಾಗಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಪಾಳೆಯಗಾರಿ ಭೂಒಡೆತನ ಪದ್ಧತಿ ವೇಗವಾಗಿ ಹಬ್ಬಿತು. ಇದಕ್ಕನುಗುಣವಾದ ತೆರಿಗೆ, ಗೇಣಿ ಪದ್ಧತಿಗಳು ಜಾರಿಗೆ ಬಂದವು. ಮುಸ್ಲಿಂಮೇತರರಿಗೆ ಜಿಜಿಯಾ ತೆರಿಗೆ, ಸಾರ್ವಜನಿಕ ಕೆಲಸ ಕಾರ್ಯಗಳಿಗೆ ಕಡ್ಡಾಯ ಬಿಟ್ಟಿ ಸೇವೆ ಮುಂತಾದ ಪಾಳೆಯಗಾರಿ ಕ್ರಮಗಳು ಜಾರಿಗೆ ಬಂದವು. ಭೂಒಡೆತನ ಮತ್ತು ಈ ರೀತಿಯ ಬದಲಾವಣೆಯಿಂದುಂಟಾದ ಹೊಸ ಪಾಳೆಯಗಾರಿ ಸಾಮಾಜಿಕ ಸಂಬಂಧಗಳನ್ನು ಸಮರ್ಥಿಸುವುದಕ್ಕಾಗಿ ಕ್ರಿ.ಶ. 851ರಲ್ಲಿ ಇಸ್ಲಾಂನ ಸುನ್ನಿ ಪಂಥವನ್ನು ಮುಖ್ಯ ಧರ್ಮವಾಗಿ ಘೋಷಿಸಲಾಯಿತು. ಮುಸ್ಲಿಂ ಧರ್ಮಾಧಿಕಾರಿಗಳಿಗೆ ನೀಡಲಾದ ಭೂಮಿಗೆ ತೆರಿಗೆ ವಿನಾಯಿತಿ, ಬಡ ರೈತರು ಮಸೀದಿಗಳಿಗೆ ಮಾರಿದ ಭೂಮಿ ಇತ್ಯಾದಿಗಳಿಂದ ಮುಸ್ಲಿಂ ಧರ್ಮಾಧಿಕಾರಿಗಳು ಅಫ್‌ಘಾನ್ ಪಾಳೆಯಗಾರಿ ಪ್ರಭುತ್ವದ ಭಾಗವಾದರು ಪಾಳೆಯಗಾರಿ ಪ್ರಭುತ್ವದ ವಿರುದ್ಧ ಜನತಾ ದಂಗೆಗಳನ್ನು ಹತ್ತಿಕ್ಕುವಲ್ಲಿ, ಧರ್ಮವನ್ನು ಉಪಯೋಗಿಸುವಲ್ಲಿ ಇವರು ಸಹಾಯವಾದರು.

ಜನತಾ ದಂಗೆಗಳ ನಾಯಕತ್ವವನ್ನು ಇಸ್ಲಾಂನ ಉದಾರ ಪಂಥಗಳ ನಾಯಕರು ವಹಿಸಿದರು ಎಂಬುದು ಗಮನಾರ್ಹ. 16ನೇ ಶತಮಾನದಲ್ಲಿ ಪಾಳೆಯಗಾರಿ-ವಿರೋಧಿ, ಮೊಗಲ್-ವಿರೋಧಿ ದಂಗೆಗಳ ನಾಯಕತ್ವವನ್ನು ವಹಿಸಿದ ಬಯಾಜಿದ್ ಅನ್ಸಾರಿ "ರೋಶನ್" ಇಂತಹ ಒಬ್ಬ ನಾಯಕ. ಅಷ್ಟೇ ಅಲ್ಲದೆ ಮುಸ್ಲಿಂ ಧರ್ಮ ಸಂಸ್ಥೆಗಳಲ್ಲಿ ವರ್ಗ ಭೇದಗಳು ಸ್ಪಷ್ಟವಾಗುತ್ತಾ ಬಂದವು. ಉಚ್ಛ ಸ್ತರದ ಮುಸ್ಲಿಂ ಧರ್ಮಾಧಿಕಾರಿಗಳು ಭಾರಿ ಭೂಮಾಲಿಕರಾಗಿದ್ದು 'ಉಲೆಮಾ' ಎಂಬ ಕೇಂದ್ರೀಕೃತ ಧರ್ಮ ಸಂಸ್ಥೆಗಳ ಮೂಲಕ ತಮ್ಮ ಅಧಿಕಾರ ಚಲಾಯಿಸಿದರೆ, ಕೆಳಹಂತದ ಮುಲ್ಲಾ ಮುಂತಾದ ಧರ್ಮ ಪ್ರಚಾರಕ, ಅರ್ಚಕರ ಜೀವನ ಮಟ್ಟ ಬಡರೈತರ ಮಟ್ಟದಲ್ಲಿತ್ತು. ಈಗಲೂ ಇದೆ. ಕೆಳಹಂತದ ಈ ಮುಲ್ಲಾಗಳ ದೊಡ್ಡ ಭಾಗ ಯಾವಾಗಲೂ ಸಮಾನತೆ, ಜನಸಾಮಾನ್ಯರಿಗೆ ನ್ಯಾಯದ ಪರವಾಗಿರುತ್ತಾರೆ. ಆದ್ದರಿಂದ ಪ್ರಜಾಸತ್ತಾತ್ಮಕ ಕ್ರಾಂತಿಯಲ್ಲಿ ಇವರಿಗೆ ಸೂಕ್ತ ಪಾತ್ರವಿದ್ದೇ ಇದೆ. ಅದರಲ್ಲೂ ಇವರಿಗೆ ದೇಶದ ಶೈಕ್ಷಣಿಕ, ಸಾಮಾಜಿಕ ಕ್ಷೇತ್ರದಲ್ಲಿರುವ ಪ್ರಾಮುಖ್ಯತೆ ದೃಷ್ಟಿಯಿಂದಲೂ ಇದು ಮುಖ್ಯ. ದ. ಅಮೇರಿಕಾದ ಹಲವು ಜನತಾ ಹೋರಾಟಗಳಲ್ಲಿ ಕ್ರಿಶ್ಚಿಯನ್ ಪಾದ್ರಿಗಳ ಪಾತ್ರ ಇದಕ್ಕೆ ಒಳ್ಳೆಯ ಉದಾಹರಣೆ.

## ಧರ್ಮ ಮತ್ತು ರಾಜಕೀಯ

ಕ್ರಾಂತಿಯ ಮೊದಲ ಹಂತದಲ್ಲಿ [ಅಮೀನ್ ನಾಯಕತ್ವದಲ್ಲಿ] ಧರ್ಮ ಪ್ರಚಾರಕ-ವಿರೋಧಿ ಧೋರಣೆಯನ್ನು ಅನುಸರಿಸಲಾಯಿತು. ಕ್ರಾಂತಿಯ ವಿರುದ್ಧ ಸೊಲ್ಲೆತ್ತಿದ ಮುಲ್ಲಾಗಳನ್ನು ಕೊಲ್ಲಲಾಯಿತು. ಮಸೀದಿಗಳನ್ನು ಶಾಲೆಗಳಾಗಿ, ಗೋಡೌನುಗಳಾಗಿ ಪರಿವರ್ತಿಸಲಾಯಿತು. ಯುವಕ ಅನನುಭವಿ ಪಕ್ಷದ ಕಾರ್ಯಕರ್ತರು ಧರ್ಮದ ವಿರುದ್ಧ ನಾಸ್ತಿಕ ಹೋರಾಟಕ್ಕೆ ಮಿತಿ ಮೀರಿದ ಪ್ರಾಮುಖ್ಯತೆ ಕೊಟ್ಟರು. ಇದು ಹೊರಗಿನ ಆಕ್ರಮಣ, ಜನರ ಹಿಂದುಳಿದಿರುವಿಕೆಯ ದೃಷ್ಟಿಯಿಂದ ತಪ್ಪಾಗಿತ್ತು.

ಇಂತಹ ತಪ್ಪು ನೀತಿಗಳನ್ನು ಸರಿಪಡಿಸಲಾಗುತ್ತಿದೆ. ಮುಲ್ಲಾಗಳ ಜೀವನ ಮಟ್ಟ ಸುಧಾರಣೆಗೆ ಹೆಚ್ಚಿನ ಗಮನ ಕೊಡಲಾಗಿದೆ. ಇದು ಇವರನ್ನು ಪ್ರತಿಗಾಮಿ ಧರ್ಮಾಧಿಕಾರಿಗಳು, ಭೂಮಾಲಿಕರ ದಾನದ ಹಂಗಿನಿಂದ ತಪ್ಪಿಸುವ ದೃಷ್ಟಿಯಿಂದ ಮುಖ್ಯವಾದುದು. ಕೆಲವು ಉಚ್ಚ ಧರ್ಮಾಧಿಕಾರಿಗಳಿಗೆ ಸೀಮಿತವಾಗಿದ್ದ 'ಉಲೆಮಾ' ಮತ್ತು 'ಜಮಾತ್' ಗಳನ್ನು ವಿಸ್ತರಿಸಲಾಗಿದೆ. ಇದನ್ನು ಪ್ರಾಂತ್ಯ ಹಂತಗಳಲ್ಲೂ

[6ನೇ ಪುಟ ನೋಡಿ]

# "ಅಪ್ರತ್ಯಕ್ಷ ತೆರಿಗೆ ಹೆಚ್ಚುತ್ತಿದೆ"

[2ನೇ ಪುಟದಿಂದ]

396 ಕೋಟಿಯಿಂದ ರೂ40,919 ಕೋಟಿಗೇರಿತು. ನೂರುಪಾಲು ಹೆಚ್ಚಾಯಿತು! 1984-85ರಿಂದ1986-87ರ ಅವಧಿಯಲ್ಲಿ ರೂ 30,484 ಕೋಟಿಯಿಂದ ರೂ40,919 ಕೋಟಿಗೇರಿತು. ಎರಡು ವರ್ಷಗಳಲ್ಲಿ ಸುಮಾರು 10,000ಕೋಟಿಯಷ್ಟು ಜನಸಾಮಾನ್ಯರ ಹೊಟ್ಟೆಯಮೇಲೆ ಅಪ್ರತ್ಯಕ್ಷ ತೆರಿಗೆಯ ಭಾರದಲ್ಲಿ ಹೆಚ್ಚಳ! ಒಟ್ಟು ತೆರಿಗೆ ಸಂಗ್ರಹದಲ್ಲಿ 1950-51ರಲ್ಲಿ ಪ್ರತ್ಯಕ್ಷ ತೆರಿಗೆಯ ಅಂಶ ಶೇ. 43.5 ಮತ್ತು ಅಪ್ರತ್ಯಕ್ಷ ತೆರಿಗೆಯ ಅಂಶ ಶೇ. 56.5 1986-87ರಲ್ಲಿ ಇವುಗಳ ಪ್ರಮಾಣ ಶೇ. 18.9 ಮತ್ತು ಶೇ. 81.1 ಸರ್ಕಾರದ ಅಪ್ರತ್ಯಕ್ಷ ತೆರಿಗೆ ಸಂಗ್ರಹದ ಅಂಶ ಹೆಚ್ಚಾಗುತ್ತಿದ್ದು ಜನೋಪಯೋಗಿ ಅಭಿವೃದ್ಧಿ ವೆಚ್ಚದ ಪ್ರಮಾಣಕಡಿಮೆಯಾಗುತ್ತದೆ. 1985-86 ರಲ್ಲಿ ಹಿಂದಿನ ವರ್ಷಕ್ಕಿಂತ ಶೇ 22 ರಷ್ಟುಅಭಿವೃದ್ಧಿ ವೆಚ್ಚ ಹೆಚ್ಚಾಗಿದ್ದು, 1986-87ರಲ್ಲಿ ಸಂಪನ್ಮೂಲದ ಕೊರತೆಯಿಂದಾಗಿ ಅಭಿವೃದ್ಧಿ ವೆಚ್ಚದ ಹೆಚ್ಚಳವು ಶೇ. 4ಕ್ಕೆ ಇಳಿದು ಬಿಟ್ಟಿದೆ. ಅಭಿವೃದ್ಧಿ ವೆಚ್ಚ ಕುಂಠಿತವಾಗಿ ನಿರುದ್ಯೋಗ ನಿವಾರಣೆ, ಬಡತನ ಪರಿಹಾರ ಕಾರ್ಯಗಳು ಹಿಂದುಳಿಯುತ್ತವೆ. ರಕ್ಷಣೆ, ಕಾನೂನು ಮತ್ತು ಶಿಸ್ತು, ಆಡಳಿತ ಸಹಾಯಧನ ಮುಂತಾದ ಸರಕಾರದ ವೆಚ್ಚಗಳೇ ಹೆಚ್ಚಾಗುತ್ತಿವೆ. ಸರ್ಕಾರದ ಒಟ್ಟು ವೆಚ್ಚದಲ್ಲಿ ಆರ್ಥಿಕ!ಅಭಿವೃದ್ಧಿ ವೆಚ್ಚದ ಅಂಶವು 1978-79ರಲ್ಲಿ ಶೇ. 64.5ರಷ್ಟಾಗಿದ್ದು, 1983-84 ರಲ್ಲಿ ಶೇ. 61.9, 1984 ರಲ್ಲಿ ಶೇ. 62.9 ಮತ್ತು 1986-87 ರಲ್ಲಿ ಶೇ. 59.3 ಕ್ಕೆ ಇಳಿದಿದೆ. (ಇಂಡಿಯನ್ ಎಕ್ಸ್‌ಪ್ರೆಸ್ 9.2.87)

## ನಿರುದ್ಯೋಗ, ಬಡತನ ಹೆಚ್ಚುತ್ತಿದೆ

ಹಿಂದಿನ ಯೋಜನೆಗಳಂತೆಯೇ ಏಳನೇ ಯೋಜನೆಯಲ್ಲಿಯೂ ನಿರುದ್ಯೋಗಸ್ಥರ ಸಂಖ್ಯೆ ಹೆಚ್ಚುತ್ತಲೇ ಇದೆ. ಉದ್ಯೋಗ ವಿನಿಮಯಕೇಂದ್ರಗಳ ಅಂಕೆ ಸಂಖ್ಯೆಯಂತೆ ಜನವರಿ 1985ರಲ್ಲಿ ನಿರುದ್ಯೋಗಸ್ಥರ ಸಂಖ್ಯೆ 236 ಮಿಲಿಯ, ಜನವರಿ 1987ರಲ್ಲಿ 265 ಮಿಲಿಯ. ಫೆಬ್ರವರಿ 1986ರಲ್ಲಿ 268 ಮಿಲಿಯ, ಜನವರಿ 1987 ರಲ್ಲಿ 300 ಮಿಲಿಯಕ್ಕೇರಿರಬಹುದು. ಇಷ್ಟೇ ಅಲ್ಲದೆ ಉದ್ಯೋಗವಿನಿಮಯಕೇಂದ್ರಗಳ ಹೊರಗೆ ನಿರುದ್ಯೋಗಸ್ಥರ ಸಂಖ್ಯೆ ನಗರಗಳ ಕೊಳಚೆ ಪ್ರದೇಶಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ 300 ಮಿಲಿಯಕ್ಕೂ ಹೆಚ್ಚಾಗಿದೆ. ಪ್ರಧಾನಿ ರಾಜೀವ್‌ಗಾಂಧಿ ಎಲ್ಲಾ ಸಭೆ ಸಮ್ಮೇಳನಗಳಲ್ಲಿ ಘೋಷಿಸುತ್ತಿದ್ದಾರೆ ಆರ್ಥಿಕ ಅಭಿವೃದ್ಧಿಯಗುರಿ ಉತ್ಪಾದನೆ ಹೆಚ್ಚಿಸುವುದೇಹೊರತು ಹೊರತು ಉದ್ಯೋಗ ಹೆಚ್ಚಿಸುವುದಲ್ಲ ಎಂದು. ಸಾರ್ವಜನಿಕ ಸಂಸ್ಥೆಗಳಲ್ಲಿ ನಷ್ಟದ ನೆಪದಲ್ಲೂ, ಆಧುನೀಕರಣದ ನೆವದಲ್ಲೂ ಸಾವಿರಾರು, ಲಕ್ಷಗಟ್ಟಲೆ ಕಾರ್ಮಿಕರನ್ನು ಕೆಲಸದಿಂದ ಕಿತ್ತುಹಾಕಲಾಗುತ್ತಿದೆ. ಖಾಸಗೀ ರಂಗದಲ್ಲಿ ಹೊಸ ಉದ್ಯೋಗಾವಕಾಶಗಳೇ ದುರ್ಬರವಾಗುತ್ತಿದೆ. ಅಲ್ಲಿಗೂ ಒಂದು ಲಕ್ಷಕ್ಕೂ ಹೆಚ್ಚಿನ ಸಣ್ಣ ಹಾಗೂ ಮಧ್ಯಮಮಟ್ಟದ ಕೈಗಾರಿಕೆಗಳು ದಿವಾಳಿಯಾಗುತ್ತಿದ್ದು, ಸಹಸ್ರಾರು ಕಾರ್ಮಿಕರು ಕೆಲಸ ಕಳೆದುಕೊಳ್ಳುತ್ತಿದ್ದಾರೆ. ಬೃಹತ್ ಕೈಗಾರಿಕಾ ಸಂಸ್ಥೆಗಳಲ್ಲಿ ಭಾರಿ ಪ್ರಮಾಣದಲ್ಲಿ ಆಧುನೀಕರಣ, ಯಾಂತ್ರಿಕರಣ ನಡೆಯುತ್ತಿದ್ದು ಹೊಸ ಉದ್ಯೋಗವಕಾಶ ಆಗುವ ಬದಲು, ಉದ್ಯೋಗಸ್ಥರೇ ಕೆಲಸ ಕಳೆದುಕೊಳ್ಳುತ್ತಿದ್ದಾರೆ.

ಗ್ರಾಮೀಣ ಪ್ರದೇಶಗಳಲ್ಲಿ ಭೂಮಿತಿಗಿಂತ ಹೆಚ್ಚಿನ ವ್ಯವಸಾಯ ಭೂಮಿಯನ್ನು ಬಡ ರೈತರಿಗೂ, ಭೂಹೀನ ಕೃಷಿ ಕಾರ್ಮಿಕರಿಗೂ ಮರುವಿತರಣೆ ಮಾಡುವಂತಹ ಭೂಸುಧಾರಣಾ ಕಾರ್ಯಕ್ರಮ ಸ್ಥಗಿತಗೊಂಡಿದೆ. ಗ್ರಾಮೀಣ ಬಡತನ, ದಾರಿದ್ರ್ಯ, ನಿರುದ್ಯೋಗ ಹೆಚ್ಚುತ್ತಿದೆ. ಹಸಿರು ಕ್ರಾಂತಿಯು ದೇಶದ ಕೆಲವೇ ಕಡೆಗಳಿಗೆ ಸೀಮಿತವಾಗಿದೆ. ರೈತರ ಫಸಲಿಗೆ ಸರಿಯಾದ ಬೆಲೆ ಸಿಗುವುದಿಲ್ಲ. ಅಸಂಖ್ಯಾತ ಬಡ ಹಾಗೂ ಮಧ್ಯಮ ರೈತರು ಏರುತ್ತಿರುವ ಖರ್ಚು ವೆಚ್ಚದ ಕಾರಣದಿಂದ ವ್ಯವಸಾಯಮಾಡಲು ಅಸಮರ್ಥರಾಗುತ್ತಿದ್ದಾರೆ. ಅವರು ತಮ್ಮ ಚಿಕ್ಕ ಹಿಡುವಳಿಗಳನ್ನು ಸಾಲಗಾರರಿಗೆ, ಶ್ರೀಮಂತ ರೈತರಿಗೆ ಬಿಟ್ಟುಕೊಟ್ಟು ಕೃಷಿಕಾರ್ಮಿಕರ ಸಾಲಿಗೆ ಸೇರುತ್ತಿದ್ದಾರೆ ಭೂಹೀನ ಕೃಷಿಕಾರ್ಮಿಕರು ವರ್ಷದ ಹೆಚ್ಚಿನ ದಿನಗಳಲ್ಲಿ ಕೆಲಸವಿಲ್ಲದೆ ಪಟ್ಟಣಗಳಿಗೆ ಅಧಿಕ ಸಂಖ್ಯೆಯಲ್ಲಿ ವಲಸೆ ಬರುತ್ತಿದ್ದಾರೆ. ಅಲ್ಲಿಯೂ ಕೆಲಸ ಸಿಗದೆ ಕೊಳಚೆ ಪ್ರದೇಶಗಳಲ್ಲಿ ತುಂಬಿಕೊಳ್ಳುತ್ತಿದ್ದಾರೆ. ನಿರುದ್ಯೋಗ, ಬಡತನ, ದಾರಿದ್ರ್ಯ ನಿವಾರಣೆಗಳ ಗುರಿ ಯೋಜನೆಯಲ್ಲಿಯೇ ಇಲ್ಲ. ಅವುಗಳ ತೀವ್ರ ಬೇಗೆಯನ್ನು ಪರಿಹರಿಸಲು ಕೈಗೊಂಡ ಅಲ್ಪಸ್ವಲ್ಪ ಪರಿಹಾರ ಕಾರ್ಯಗಳ ಪ್ರಯೋಜನಗಳೂ ಹೆಚ್ಚಾಗಿ ಬಡತನ ರೇಖೆಯ ಮೇಲ್ಮಟ್ಟದಲ್ಲಿರುವವರಿಗೇ ಸೇರುತ್ತಿದೆ ಎಂದು ಇತ್ತೀಚಿನ ವರದಿಗಳಿಂದ ತಿಳಿದು ಬಂದಿದೆ.

## ಸರ್ಕಾರಕ್ಕೆ ದುಡಿಯುವ ಜನರ ಎಚ್ಚರಿಕೆ:

1986-87ರವರೆಗಿನ ಆರ್ಥಿಕ ಅಸ್ಥಿರತೆ ಮತ್ತು ಬಿಕ್ಕಟ್ಟಿನ ದುಃಸ್ಥಿತಿಗಳು, ಪ್ರಧಾನ ರಾಜೀವ ಗಾಂಧಿ ಹಣಕಾಸು ಮಂತ್ರಿಸ್ಥಾನ ತಾನೇ ವಹಿಸಿಕೊಂಡು 1987-88ರ ಕೇಂದ್ರ ಮುಂಗಡ ಪತ್ರ ಸದ್ಯದಲ್ಲಿಯೇ ಸಂಸತ್ತಿನಲ್ಲಿ ಮಂಡಿಸುವ ಮೂಲಕ ಪರಿಹಾರಗೊಳ್ಳಲು ಸಾಧ್ಯವೆ? ಅಸಾಧ್ಯ ಎಂದು ದೇಶದ ಸಾರ್ವಜನಿಕ ಕ್ಷೇತ್ರದ ಸಹಸ್ರಾರು ನೌಕರರು ದಿ.21-1-87 ರಂದು ತಮ್ಮ ಸಾರ್ವತ್ರಿಕ ಮುಷ್ಕರದಲ್ಲಿ ಕೇಂದ್ರ ಸರ್ಕಾರವನ್ನು ಎಚ್ಚರಿಸಿದ್ದಾರೆ. ದೇಶದ ಗುತ್ತೇದಾರಿ ಬಂಡವಾಳಗಾರರಿಗೆ, ಶ್ರೀಮಂತ ರೈತರಿಗೆ-ಭೂಮಾಲಿಕರಿಗೆ ಹಾಗೂ ವಿದೇಶಿ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ನೀಡುತ್ತಿರುವ ಔದಾರ್ಯವನ್ನು ಕೊನೆಗಾಣಿಸಿ, ಸಾರ್ವಜನಿಕ ರಂಗದ ಮೂಲಾಧಾರದಲ್ಲಿ, ಜನಪರವಾದ ಸ್ವಾವಲಂಬನೆಯ ಗುರಿಸಾಧಿಸುವತ್ತ. ಆರ್ಥಿಕ ನೀತಿಯನ್ನು ಆಮೂಲಾಗ್ರವಾಗಿ ಬದಲಾಯಿಸಲು ಒತ್ತಾಯಿಸಿದ್ದಾರೆ. ದೇಶದ ಸಮಸ್ತ ದುಡಿಯುವ ಜನತೆ ಇದಕ್ಕೆ ಧ್ವನಿಗೂಡಿಸುತ್ತಿದ್ದಾರೆ.

●

# ಜನತೆಯ ಕೈಗೆ ಅಧಿಕಾರ

(5ನೇ ಪುಟದಿಂದ)

ಅಫ್‌ಘಾನಿಸ್ತಾನದ ರಾಜಕೀಯ ವ್ಯವಸ್ಥೆ ಜಿರ್ಗಾಗಳ ಮೇಲೆಯೇ ನಿಂತಿರಬೇಕೆಂದು ಅಮಾನುಲ್ಲಾ ಖಾನ್ ಬಯಸಿದ್ದ. ಎರಡನೇ ಮಹಾಯುದ್ಧದ ವೇಳೆ 1941ರಲ್ಲಿ ನಡೆದ ಲೋಯಾ ಜಿರ್ಗಾ ಸೋವಿಯತ್-ಅಫ್‌ಘಾನ್ ಮೈತ್ರಿಯಲ್ಲಿ ಸಂಪೂರ್ಣ ವಿಶ್ವಾಸ ವ್ಯಕ್ತಪಡಿಸಿ ಅಫ್‌ಘಾನಿಸ್ತಾನವನ್ನು ತನ್ನ ಕೈಗೊಂಬೆಯಾಗಿ ಪರಿವರ್ತಿಸುವ ಜರ್ಮನಿಯ ಪಿತೂರಿಯನ್ನು ಸೋಲಿಸಿತು 1955ರಲ್ಲಿ ನಡೆದ ಲೋಯಾ ಜಿರ್ಗಾ ಅಫ್‌ಘಾನಿಸ್ತಾನವು ಅಮೇರಿಕಾದ ನೇತೃತ್ವದಲ್ಲಿರುವ ಸೈನಿಕ ಒಕ್ಕೂಟಗಳಿಗೆ ತಾನು ಒಳಪಡಲಾರೆನೆಂದು ಸ್ಪಷ್ಟಪಡಿಸಿತು.

## ಕ್ರಾಂತಿಯ ನಂತರ

ಇಂತಹ ಮಹತ್ವಪೂರ್ಣ ನಿರ್ಧಾರಗಳನ್ನು ಕೈಗೊಂಡಿರುವ 'ಜಿರ್ಗಾ' ವೇದಿಕೆಯನ್ನು 1978ರ ಏಪ್ರಿಲ್ ಕ್ರಾಂತಿಯ ನಂತರ ಪಿ.ಡಿ.ಪಿ.ಎ. ಕ್ರಾಂತಿಯ ಯಶಸ್ಸಿಗಾಗಿ ಪರಿಣಾಮಕಾರಿಯಾಗಿ ಬಳಸಿ ಕೊಳ್ಳಲಾರಂಭಿಸಿದೆ ಪಿ.ಡಿ.ಪಿ.ಎ. ಇಪ್ಪತ್ತೊಂದು ವರ್ಷಗಳ ಹಿಂದೆ ತಾನು ಅಸ್ತಿತ್ವಕ್ಕೆ ಬಂದಾಗಲೇ 'ಸ್ಥಳೀಯ ಜಿರ್ಗಾ' ವ್ಯವಸ್ಥೆಯನ್ನು ಚುನಾವಣೆಗಳ ಮೂಲಕ ಜ್ಯಾರಿಗೆ ತಂದು ಅವು ಜನತಾ ಪ್ರಜಾಸತ್ತೆಯ ಪ್ರಾಥಮಿಕ ವೇದಿಕೆಗಳಾಗಬೇಕೆಂದು ನಿರ್ಧರಿಸಿದೆ. ಪಕ್ಷದ ಪತ್ರಿಕೆಗಳಾದ 'ಖಲಕ್ ಮತ್ತು 'ಪರ್ಚಮ್' ಗಳೂ ಇದನ್ನೇ ಪ್ರತಿಪಾದಿಸುತ್ತಿವೆ. ಜಿರ್ಗಾಗಳು ಖಾಯಂ ಆಗಿ ಬಳಕೆಗೆ ಬಂದುದೇ ಅಲ್ಲದೆ ಅವುಗಳ ಹೊಸ ಸಾಧ್ಯತೆಗಳನ್ನೂ ಗುರುತಿಸಿಕೊಳ್ಳಲಾಗಿದೆ. ಎರಡುವರ್ಷಗಳ ಹಿಂದೆ-ಏಪ್ರಿಲ್ 1985ರಲ್ಲಿ ನಡೆದ 'ಲೋಯಾಜಿರ್ಗಾ' ಮತ್ತು ಅದೇ ವರ್ಷ ಸೆಪ್ಟಂಬರ್‌ನಲ್ಲಿ ನಡೆದ ಗಡಿನಾಡು ಬುಡಕಟ್ಟುಗಳ ಉನ್ನತ ಜಿರ್ಗಾ' [High Jirgha of the Frontier Tribes] ಗಳು ಅಫ್‌ಘಾನ್ ಗಣತಂತ್ರದ ಆಂತರಿಕ ಮತ್ತು ವಿದೇಶಿ ಧೋರಣೆಗಳನ್ನು ಚರ್ಚಿಸಿ ಅವುಗಳಿಗೆ ತಮ್ಮ ಸಂಪೂರ್ಣ ಒಪ್ಪಿಗೆ ನೀಡಿವೆ. ಎಪ್ರಿಲ್ 1985ರ ಈ ಲೋಯಾ ಜಿರ್ಗಾದಲ್ಲಿ ಭಾಗವಹಿಸಿದ ಪ್ರತಿನಿಧಿಗಳ ಸಂಖ್ಯೆ 1796. ಇವರಲ್ಲಿ ದುಡಿಮೆಗಾರರು, ಬುದ್ಧಿಜೀವಿಗಳು. ಅಧ್ಯಾಪಕರು, ವ್ಯಾಪಾರಿಗಳು ಮತ್ತಿತರಲ್ಲದೆ ಧಾರ್ಮಿಕ ಮುಂದಾಳುಗಳು ಹಾಗೂ 60ಮಹಿಳಾ ಪ್ರತಿನಿಧಿಗಳಿದ್ದರು. ಇದರ ನಂತರ ನಡೆದ ಗಡಿನಾಡು ಬುಡಕಟ್ಟುಗಳ ಜಿರ್ಗಾದಲ್ಲಿ ನಲವತ್ತು ಬುಡಕಟ್ಟುಗಳಿಗೆ ಸೇರಿದ್ದ 3700 ಪ್ರತಿನಿಧಿಗಳು ಭಾಗವಹಿಸಿದ್ದರು. ಇವರಲ್ಲಿ ಶೇ.65 ರಷ್ಟು ಬುಡಕಟ್ಟು ಜನಾಂಗದ ಮುಂದಾಳುಗಳು, ಶೇ. 18 ಧಾರ್ಮಿಕ ಮುಂದಾಳುಗಳು, ಶೇ. 2 ಬುಡಕಟ್ಟು ಸೈನಿಕ ಪ್ರಮುಖರು ಮತ್ತು ಶೇ.5 ರಷ್ಟು ಅಲೆಮಾರಿ ಜನಾಂಗಗಳ ಪ್ರತಿನಿಧಿಗಳು ಈ ಎರಡು ಜಿರ್ಗಾಗಳನ್ನು ಅನುಸರಿಸಿ ವಿವಿಧ ಸ್ಥಳೀಯ ಸಂಸ್ಥೆಗಳಿಗೂ ಚುನಾವಣೆಗಳು ನಡೆಯುತ್ತಿವೆ. ಅಫ್‌ಘಾನ್ ಗಣತಂತ್ರದ ಸಾಮಾಜಿಕ ಮತ್ತು ಸಾಮೂಹಿಕ ನೆಲೆಗಟ್ಟು ದಿನೇ ದಿನೇ ವಿಸ್ತಾರಗೊಂಡು ಬಲವಾಗುತ್ತಿರುವುದನ್ನು ಈ ಜಿರ್ಗಾಗಳ ಯಶಸ್ಸು ಸಾಬೀತುಪಡಿಸಿದೆ.

# ಅರಣ್ಯ ಇಲಾಖೆ ನೌಕರರ ಮುಷ್ಕರ

ದಿನಗೂಲಿ ನೌಕರರಿಗೆ ಸಮಾನ ಕೆಲಸಕ್ಕೆ ಸಮಾನ ವೇತನವನ್ನು ಕೊಡಬೇಕೆಂದು ನಮ್ಮ ದೇಶದ ಸುಪ್ರೀಂ ಕೋರ್ಟ್ ತೀರ್ಪಿತ್ತಿದೆ. ಅದೇ ರೀತಿಯಾಗಿ ಮುಂದೆ ತೀರ್ಮಾನವಾಗುವವರೆಗೂ ಯಾವುದೇ ದಿನಗೂಲಿ ನೌಕರರನ್ನು ಕೆಲಸದಿಂದ ತೆಗೆಯಬಾರದೆಂದು ಕರ್ನಾಟಕ ಸರ್ಕಾರಕ್ಕೆ ಆಜ್ಞೆ ಮಾಡಿರುತ್ತದೆ.

ಈ ಆದೇಶವನ್ನು ಉಲ್ಲಂಘಿಸಿ ಕರ್ನಾಟಕ ಸರ್ಕಾರ ವರ್ತಿಸುತ್ತಿದೆ. ಅನೇಕ ವರ್ಷಗಳಿಂದ ಕೆಲಸ ಮಾಡುತ್ತಿದ್ದ ಜಡಗೇನಹಳ್ಳಿ ನರ್ಸರಿಯಲ್ಲಿ ಕೆಲಸ ಮಾಡುತ್ತಿದ್ದ 60 ಜನ ಕಾರ್ಮಿಕರಿಗೆ ಕೆಲಸವನ್ನು ನಿರಾಕರಿಸಿರುತ್ತಾರೆ ಈ ಕಾರ್ಮಿಕರು ಬೀದಿ ಪಾಲಾಗಿದ್ದಾರೆ. ಅನೇಕ ವರ್ಷದಿಂದ ದಿನಗೂಲಿಕಾರ್ಮಿಕರಿಗೆ 11-00 ರೂ. ನಂತೆ ಕೊಡುತ್ತಿದ್ದ ಕೂಲಿಯನ್ನು ದಿನಕ್ಕೆ 9-00 ರೂ.ಗೆ ಕಡಿಮೆ ಮಾಡಿರುತ್ತಾರೆ. ಕೊಡುತ್ತಿದ್ದಕೂಲಿಯನ್ನು ಯಾವುದೇ ಕಾರಣದಿಂದ ಕಡಿಮೆ ಮಾಡಬಾರದೆಂದು ಸ್ಪಷ್ಟವಾದ ಕಾನೂನು ಇದ್ದರೂ ಕೂಲಿಯನ್ನು ಕಡಿಮೆ ಮಾಡುತ್ತಾರೆ.

ಇದನ್ನು ಪ್ರತಿಭಟಿಸಿ ಕಾಡುಗೋಡಿ ನರ್ಸರಿಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ದಿನಾಂಕ 29-1-87 ರಿಂದ ಅನಿರ್ದಿಷ್ಟ ಕಾಲ ಮುಷ್ಕರ ಮಾಡುತ್ತಿದ್ದಾರೆ. ಈ ಬಗ್ಗೆ ಅರಣ್ಯ ಮಂತ್ರಿಗಳಾದ ಶ್ರೀ ದೇಶಮುಖ್‌ರವರಿಗೆ ಕಾರ್ಮಿಕರೆಲ್ಲಾ ಹೋಗಿ ಮನವಿಯನ್ನು ಅರ್ಪಿಸಿದರು. ಮಧ್ಯಪ್ರವೇಶ ಮಾಡಲು ಕೋರಿದರು.

## ಸಂತಾಪ

ಸಿ.ಐಟಿ.ಯುನ ಬಂಟ್ವಾಳ ತಾಲ್ಲೂಕು ಸಮಿತಿಯ ಸದಸ್ಯರಾದ ಬಿ. ಹೂವಯ್ಯ ಬಂಗೇರರ ಹಿರಿಯ ಪುತ್ರ, 25 ವರ್ಷದ ದಯಾನಂದ ಬದುಕಿನ ಜಿಗುಪ್ಸೆಯಿಂದ ಸಮುದ್ರಕ್ಕೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಹೂವಯ್ಯ ಬಂಗೇರರ ಕುಟುಂಬ ಹಾಗೂ ದಿವಗಂತ ದಯಾನಂದರ ಸ್ನೇಹಿತ ಸಮುದಾಯದೊಂದಿಗೆ ಸಿ.ಪಿ.ಐ. (ಎಂ)ನ ಬಂಟ್ವಾಳ ತಾಲ್ಲೂಕು ಸಮಿತಿಯು ದುಃಖದಲ್ಲಿ ಸಹಭಾಗಿಗಿಯಾಗುತ್ತದೆಂದು ಕಾರ್ಯದರ್ಶಿ ಬಿ. ವಾಸುಗಟ್ಟಿಯವರು ತಿಳಿಸುತ್ತಾರೆ.

# "966 ಉಲೇಮಾಗಳು ಕ್ರಾಂತಿಗೆ ಬೆಂಬಲ ನೀಡಿ ಪ್ರಾಣ ಕಳೆದು ಕೊಂಡಿದ್ದಾರೆ"

(5ನೇ ಪುಟದಿಂದ)

ಸ್ಥಾಪಿಸಲಾಗಿದೆ. ಇಸ್ಲಾಂ ಮತದ ಕೂಲಂಕಷ ಅಧ್ಯಯನಕ್ಕೆ ವ್ಯವಸ್ಥೆ ಮಾಡುವ ಮೂಲಕ ಮುಲ್ಲಾಗಳು ಇಸ್ಲಾಂನ ಸಾಮಾಜಿಕ ಆಯಾಮ ಮತ್ತು ಆಧುನಿಕ ವಿಚಾರಗಳನ್ನು ಅರಗಿಸಿಕೊಳ್ಳುವುದು ಸಾಧ್ಯವಾಗಿದೆ. ಇದರಿಂದಾಗಿ ಇಂದು ಪ್ರತಿಕ್ರಾಂತಿಯ ವಿರುದ್ಧ ಸಂಘಟಿಸಿರುವ "ರಾಷ್ಟ್ರೀಯ ಪಿತೃಭೂಮಿ ರಂಗ" ದಲ್ಲಿ ಮುಲ್ಲಾಗಳು ಉತ್ಸಾಹದಿಂದ ಭಾಗವಹಿಸುತ್ತಿದ್ದಾರೆ. 966ಉಲೇಮಾಗಳು ಕ್ರಾಂತಿಗೆ ತಮ್ಮ ಬೆಂಬಲದಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ. ಅಕ್ಷರತೆ ಮತ್ತು ಮಹಿಳೆಯರನ್ನು ಉದ್ಯೋಗಕ್ಕೆ ಹಚ್ಚುವ ಕಾರ್ಯಕ್ರಮವನ್ನು ಕಾರ್ಯಗತಗೊಳಿಸುವಲ್ಲಿನ ಸೂಕ್ಷ್ಮ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಮುಲ್ಲಾಗಳ ಕೊಡುಗೆ ಅಪಾರ. ಜನರ ಅಜ್ಞಾನ ಮತ್ತು ಧರ್ಮ ಶ್ರದ್ಧೆಯನ್ನು ಉಪಯೋಗಿಸಿಕೊಳ್ಳುವ ಉದ್ದೇಶದಿಂದ ಕ್ರಾಂತಿಯನ್ನು ಇಸ್ಲಾಂ-ವಿರೋಧಿ ಎನ್ನುವ ಪ್ರತಿಕ್ರಾಂತಿ ಪ್ರಚಾರವನ್ನು ಹಿಮ್ಮೆಟ್ಟಿಸುವಲ್ಲಿ ಸಹ ಮುಲ್ಲಾಗಳು ಅಮೂಲ್ಯ ಕೆಲಸ ಮಾಡುತ್ತಿದ್ದಾರೆ.

ಕ್ರಾಂತಿಯನ್ನು ಹೆಚ್ಚಿನ ಮುಲ್ಲಾಗಳು ಎಂದೂ ಇಸ್ಲಾಂ-ವಿರೋಧಿ ಎಂದು ವಿರೋಧಿಸಿರಲಿಲ್ಲ. ಆದರೆ ಇಂದು ಕ್ರಾಂತಿಯ ರಕ್ಷಣೆಯಲ್ಲಿ ಸಕ್ರಿಯ ಪಾತ್ರ ವಹಿಸುತ್ತಿದ್ದಾರೆ. ಇಸ್ಲಾಂ ಕ್ರಾಂತಿಯನ್ನು ಬೆಂಬಲಿಸುತ್ತಿರುವ ದುಡಿಯುವ ಜನರ ನಾಗರಿಕತೆ, ಸಂಸ್ಕೃತಿಯ ಅವಿಭಾಜ್ಯ ಅಂಗ. ಪ್ರಜಾಸತ್ತಾತ್ಮಕ ಕ್ರಾಂತಿಯ ಹೋರಾಟದಲ್ಲಿ ಇಸ್ಲಾಂನ ಒಳ್ಳೆಯ ಅಂಶಗಳನ್ನು ಎತ್ತಿಹಿಡಿಯಲಾಗುತ್ತಿದೆ. ಕ್ರಾಂತಿ ಮುಂದುವರಿದಂತೆ ಜನರೇ ಧರ್ಮವನ್ನು ಸಾರ್ವಜನಿಕ ಜೀವನದಿಂದ ಪ್ರತ್ಯೇಕಿಸುವ ಅಗತ್ಯವನ್ನು ಮನಗಾಣುತ್ತಾರೆ ಎಂಬುದು ಅಫ್‌ಘಾನ್ ಕ್ರಾಂತಿಯ ನೀತಿ. ಕ್ರಾಂತಿ ತನ್ನನ್ನು ಉಳಿಸಿಕೊಳ್ಳಲು ಇಸ್ಲಾಂ ಮೂಲಭೂತವಾದ ಒಪ್ಪಿಕೊಳ್ಳುತ್ತಿದೆ ಎಂಬ ಸಾಮ್ರಾಜ್ಯಶಾಹಿ, ಮತ್ತು ನಮ್ಮ ಬೂರ್ಜ್ವಾ ಮಾಧ್ಯಮಗಳ ಕಿಡಿಗೇಡಿ ಪ್ರಚಾರದ ಹಿನ್ನೆಲೆಯಲ್ಲಿ ಇದನ್ನು ಅರ್ಥಮಾಡಿಕೊಳ್ಳುವುದು ಅತ್ಯಗತ್ಯ.

○

# "ಇದು ಥ್ಯಾಚರ್‌ರ ಬ್ರಿಟನ್"

ವ್ಯಾಪ್ಪಿಂಗ್ ಎಂಬುದು ಲಂಡನ್ನಿನ ಬಂದರು ಪ್ರದೇಶ. ಜನವರಿ 24 ಮೂವತ್ತು ಸಾವಿರ ಜನ ಪ್ರೈನಡುಗಿಸುವ ಚಳಿಯಲ್ಲಿ ಕಬ್ಬಿಣದ ಮುಳ್ಳು ಬೇಲಿಯಿಂದ, ಎತ್ತರದ ಗೋಡೆಯಿಂದ, ರಾಕ್ಷಸಾಕಾರದ ನಾಯಿಗಳಿಂದ ಆವೃತ್ತವಾದ ಮುದ್ರಣ ಸ್ಥಾವರದೆದುರು ಮತಪ್ರದರ್ಶನ ನಡೆಸುತ್ತಿದ್ದರು. ಸಭೆ ಚದುರಿಸಲು ಬಂದ ಥ್ಯಾಚರ್ ಸರ್ಕಾರದ ಸಶಸ್ತ್ರ ಅಶ್ವಾರೋಹಿ ಪೋಲಿಸರು 300 ಜನರನ್ನು ತೀವ್ರವಾಗಿ ಗಾಯಗೊಳಿಸಿದರು. "ಇದು ಥ್ಯಾಚರ್‌ರ ಬ್ರಿಟನ್. ತಮ್ಮ ಮುಷ್ಕರದ ಸಮಯದಲ್ಲಿ ಗಣಿಕೆಲಸಗಾರರು ಇದನ್ನು ಪ್ರತಿ ದಿನ ಕಂಡಿದ್ದರು" ಎಂದರು ಸಭೆಯುನ್ನುದ್ದೇಶಿಸಿ ಮಾತನಾಡಿದ ಬ್ರಿಟನ್ನಿನ ಐತಿಹಾಸಿಕ ಗಣಿಮುಷ್ಕರದ ಮುಖಂಡ ಆರ್ಥರ್ ಸ್ಕಾರ್‌ಗಿಲ್.

ಅಂದು "ದಿ ಟೈಮ್ಸ್" ಪತ್ರಿಕೆಯನ್ನು ಪ್ರಕಟಿಸುವ ನ್ಯೂಸ್ ಇಂಟರ್‌ನ್ಯಾಷನಲ್ ಕಂಪೆನಿಯ 6000 ಮುದ್ರಣ ಕಾರ್ಮಿಕರ ಮುಷ್ಕರ ಆರಂಭವಾಗಿ ಸರಿಯಾಗಿ ಒಂದು ವರ್ಷವಾಗಿತ್ತು. ಆ ಸಂದರ್ಭದಲ್ಲಿ ಮುಷ್ಕರ ನಿರತ ಕಾರ್ಮಿಕರಿಗೆ ಸೌಹಾರ್ದತೆ ಸೂಚಿಸಲು ಆ ಮೂವತ್ತು ಸಾವಿರ ಮಂದಿ ನೆರೆದಿದ್ದರು. ಪ್ರಿಂಟರ್ಸ್ ಯೂನಿಯನ್ನನ್ನು ಸದೆ ಬಡಿಯಲು ಈ ಕಂಪೆನಿಯ ಮಾಲಕ ರೂಪರ್ಟ್ ಮರ್ಡೋಕ್ ಪತ್ರಿಕೆಯ ಮುದ್ರಣ ಕೆಲಸವನ್ನು ಬ್ರಿಟನ್ನಿನ ಪತ್ರಿಕಾ ಕಛೇರಿಗಳಿರುವ ಫ್ಲೀಟ್ ಸ್ಟ್ರೀಟ್‌ನಿಂದ ಮೇಲೆ ಹೇಳಿದ ಕೋಟೆಯೊಳಕ್ಕೆ ಸ್ಥಳಾಂತರಿಸಿದ. ಮುಷ್ಕರ ನಡೆಸುತ್ತಿದ್ದ ಎಲ್ಲಾ 6000 ಕಾರ್ಮಿಕರನ್ನು ವಜಾ ಮಾಡಿದ ಅಂದಿನಿಂದ ಮುದ್ರಣ ಕಾರ್ಮಿಕರು ಹಾಗೂ ಇತರ ಕಾರ್ಮಿಕ ಆಂದೋಲನದ ಬೆಂಬಲಿಗರು ಪ್ರತಿದಿನ ವಾಪ್ಪಿಂಗ್ "ಕೋಟೆ" ಯೆದರು ಪಿಕೆಟಿಂಗ್ ನಡೆಸುತ್ತಿದ್ದಾರೆ. ಇತ್ತೀಚಿಗೆ ಪಿಕೆಟಿಂಗ್ ಮಾಡುತ್ತಿದ್ದ ಪ್ರಿಂಟರ್ಸ್ ಯುನಿಯನ್ ಮುಖಂಡ ಮೈಕ್ ಹಿಕ್ಸ್‌ರನ್ನು ಬಂಧಿಸಿ ಶಿಕ್ಷೆಗೆ ಗುರಿಪಡಿಸಲಾಗಿದೆ.

ಬ್ರಿಟನ್ನಿನ ಚಾರಿತ್ರಿಕ ಗಣಿಕೆಲಸಗಾರರ ಮುಷ್ಕರದ ನಂತರ ಈ ವ್ಯಾಪಿಂಗ್ ಹೋರಾಟ ಬ್ರಿಟನ್ನಿನ ಕಾರ್ಮಿಕ ಆಂದೋಲನದ ಕೇಂದ್ರ ಬಿಂದುವಾಗಿದೆ. ಈ ಸ್ಥಾವರದ ಕೆಲಸ ನಡೆಸುತ್ತಿರುವ ಕರಿಗಾಲುಗಳು ಇಲೆಕ್ಟ್ರಿಷಿಯನ್ಸ್ ಯೂನಿಯನ್‌ಗೆ ಸೇರಿದವರೆಂಬುದು ಗಮನೀಯ. ಆದ್ದರಿಂದ ಬ್ರಿಟನ್ನಿನ ಕಾರ್ಮಿಕ ಆಂದೋಲನದ ಬಲಪಂಥೀಯ ಮುಖಂಡರ ವಿರುದ್ಧ ನಡೆಯುತ್ತಿರುವ ಹೋರಾಟದ ಪ್ರತಿಬಿಂಬ ಕೂಡಾ ಈ ಪ್ರಿಂಟರುಗಳ ಮುಷ್ಕರ. ಟೈಂಸ್ ಪತ್ರಿಕೆಯ ಮಾಲಕನ ಕೋಟೆ ಈಗ ಮುದ್ರಣ ಕಾರ್ಮಿಕರ ಮತ್ತು ಬ್ರಿಟನ್ನಿನ ಕಾರ್ಮಿಕ ಆಂದೋಲನದ ಸಮರಶೀಲ ವಿಭಾಗಗಳ ಮುತ್ತಿಗೆಗೊಳಗಾಗಿದೆ. ●

# ಇಥಿಯೋಪಿಯಾದ ಅಕ್ಷರ ಕ್ರಾಂತಿ

ಖಡ್ಗಕ್ಕಿಂತ ಲೇಖನಿ ಹರಿತ ಆದುದರಿಂದಲೇ ಇಂದು ಇಥಿಯೋಪಿಯಾದಲ್ಲಿ ಲೇಖನಿ ಸಮರ ನಡೆಯುತ್ತಿದೆ. ಉದ್ದೇಶಃ ಪ್ರಾಬಲ್ಯ ಪಡೆಯಲು ಅಲ್ಲ ಅಕ್ಷರತೆ ಹರಡಲು. ದೇಶದ ಅಕ್ಷರತಾ ಕಾರ್ಯಕರ್ತರು ಮನೆಮನೆಯ ಮುಂದೆ ಲೇಖನಿ ಚಿತ್ರ ಇರುವ ಪೋಸ್ಟರ್ ಅಂಟಿಸುತ್ತಾ ಹೊರಟಿದ್ದಾರೆ. ಅನಕ್ಷರಸ್ಥರಿದ್ದರೆ ಕಪ್ಪು ಬಣ್ಣದ ಪೋಸ್ಟರ್, ಅಕ್ಷರಸ್ಥರಿದ್ದರೆ ಕೆಂಪು ಬಣ್ಣದ ಪೋಸ್ಟರ್. ಇಂಥ ಸಮರದಿಂದ ಅನಕ್ಷರಸ್ಥರನ್ನು ಪತ್ತೆಮಾಡಿ ಅವರಿಗೆ ಅಕ್ಷರಭ್ಯಾಸ ಮಾಡಿಸುವ ಗುರಿ ಸರ್ಕಾರದ್ದು.

ಕ್ರಿ.ಶ. 2000ದ ಹೊತ್ತಿಗೆ ಶೇ. 100ರಷ್ಟು ಅಕ್ಷರತೆ ತರುವ ಗುರಿ ಸರ್ಕಾರದ್ದು. ದೇಶದ ರಾಜಧಾನಿ ಅಡಿಸ್ ಅಬಾಬಾದಲ್ಲಿರುವ ವಿಶ್ವಸಂಸ್ಥೆ ಅಧಿಕಾರಿಯೊಬ್ಬರ ಮನೆಮುಂದೆ ಕಪ್ಪು ಬಣ್ಣದ ಪೋಸ್ಟರ್ ಅಂಟಿಸಿದಾಗ ಅವರಿಗೆಲ್ಲ ಕೋಪ. ಏನಿದು ತಮಾಷೆ ಏನಿದು ತಮಾಷೆ ಎಂದು ಕೂಗಾಟ. ಆದರೆ ಅವರ ಮನೆಯ ಕೆಲಸದಾಕೆ ಅನಕ್ಷರಸ್ಥೆ. ಹಾಗಾಗಿ ಕಪ್ಪುಬಣ್ಣದ ಪೋಸ್ಟರ್. ಆಕೆ ಅಕ್ಷರಸ್ಥೆ ಆಗುವವರೆಗೂ ಪೋಸ್ಟರ್ ತೆಗೆಯುವಂತಿಲ್ಲ-ಸರ್ಕಾರದ ಆಜ್ಞೆ !

(ಕೃಪೆ : ಸುಧಾ)

## ದ. ಆಫ್ರಿಕಾ ಕಮ್ಯುನಿಸ್ಟ್ ಪಕ್ಷದ ಪ್ರ. ಕಾರ್ಯದರ್ಶಿ

ಜೋ ಸ್ಲಾವೋ ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷದ ಹೊಸ ಪ್ರಧಾನ ಕಾರ್ಯದರ್ಶಿಯಾಗಿ ಚುನಾಯಿತರಾಗಿದ್ದಾರೆ. ಕಳೆದ ವರ್ಷ ನಿಧನರಾದ ಮೋಸಸ್ ಮಾಭಿಡಾರವರ ಸ್ಥಾನದಲ್ಲಿ ಇವರನ್ನು ಪಕ್ಷದ ಕೇಂದ್ರ ಸಮಿತಿ ಆರಿಸಿದೆ. ಇವರು ಇದುವರೆಗೆ ಪಕ್ಷದ ಅಧ್ಯಕ್ಷರಾಗಿದ್ದರು. ಅಧ್ಯಕ್ಷ ಸ್ಥಾನಕ್ಕೆ ಪ್ರಮುಖ ಕಾರ್ಮಿಕ ಮುಖಂಡರಾದ ಡಾನ್ ಟ್ಲೊಮೇಯವರನ್ನು ಆರಿಸಲಾಗಿದೆ. ಟ್ಲೊಮೆ ಆಫ್ರಿಕಾ ರಾಷ್ಟ್ರೀಯ ಕಾಂಗ್ರೆಸಿನ ಕಾರ್ಯಕಾರಿ ಮಂಡಳಿಯ ಸದಸ್ಯರ ಕೂಡಾ. ಜೊ ಸ್ಲಾವೊ ಎ.ಎನ್.ಸಿ.ಯ ಸೈನಿಕ ವಿಭಾಗದ ಮುಖ್ಯಸ್ಥರು ಕೂಡಾ ಆಗಿದ್ದರು. ಇವರಪತ್ನಿ ಹಾಗೂ ಪ್ರಸಿದ್ಧ ಲೇಖಕಿ ರೂಥ್ ಫಸ್ಟ್ 1982 ರಲ್ಲಿ ಪಾರ್ಸೆಲ್ ಬಾಂಬ್ ಮೂಲಕ ಕೊಲೆಯಾದರು. ಕಾಮ್ರೆಡ್ ಸ್ಲಾವೋ ಒಬ್ಬ ಬಿಳಿಯರು ಎಂಬುದು ಗಮನಾರ್ಹ. ಕಾರ್ಮೇಡ್ ಟ್ಲೊಮೆ ಕಳೆದ ಐವತ್ತು ವರ್ಷಗಳಿಂದ ದಕ್ಷಿಣ ಆಫ್ರಿಕಾದ ಕಾರ್ಮಿಕ ಆಂದೋಲನದ ಪ್ರಮುಖ ಮುಖಂಡರು 1953 ರಿಂದ ವರ್ಣದ್ವೇಷಿ ಸರ್ಕಾರ ಅವರನ್ನು ದೇಶಭ್ರಷ್ಟಗೊಳಿಸಿದೆ.

# ಜಾಗತಿಕ ಪೋಲೀಸನಾಗಿ ಅಮೇರಿಕಾ ವರ್ತನೆ

ಅಧ್ಯಕ್ಷ ರೇಗನ್ ತನ್ನ ಉಳಿದ ಎರಡು ವರ್ಷಗಳ ಅಧಿಕಾರಾವಧಿಯಲ್ಲಿ ಕೂಡಾ ಬೇರೆ ದೇಶಗಳ ವ್ಯವಹಾರಗಳಲ್ಲಿ ತಲೆಹಾಕುವ, ಆಕ್ರಾಮಕ ನಿಲುವು ತಳೆಯುವ ಧೋರಣೆಯನ್ನು ಮುಂದುವರಿಸುವ ನಿರ್ಧಾರ ಮಾಡಿದಂತಿದೆ. ಜನವರಿ 28ರಂದು ಅವರು ಅಮೆರಿಕನ್ ಕಾಂಗ್ರೆಸ್‌ನಲ್ಲಿ ಮಾಡಿದ ಭಾಷಣದಿಂದ ಇದು ವ್ಯಕ್ತಗೊಂಡಿದೆ.

1823ರಲ್ಲಿ ಲ್ಯಾಟಿನ್ ಅಮೆರಿಕಾದಲ್ಲಿ ಸ್ಪಾನಿಷ್ ಸಾಮ್ರಾಜ್ಯಶಾಹಿಯ ಮೇಲೆ ಪ್ರವರ್ಧಮಾನ ಅಮೆರಿಕನ್ ಸಾಮ್ರಾಜ್ಯಶಾಹಿಯ ಪ್ರಾಬಲ್ಯ ಸಾಧಿಸಲು ಆಗಿನ ಅಧ್ಯಕ್ಷ ಮನ್ರೋ ಒಂದು ಸಿದ್ಧಾಂತ ಮಂಡಿಸಿದ್ದರು. ಅದೇನೆಂದರೆ ಅಮೆರಿಕನ್ ಹಿತಾಸಕ್ತಿಗಳಿಗೆ ಬೆದರಿಕೆ ಬಂದರೆ 'ತನ್ನ' ಗೋಳಾರ್ಧದ ಯಾವುದೇ ಭಾಗದಲ್ಲಿ ಅದು ಮಧ್ಯೆ ತಲೆ ಹಾಕುತ್ತದೆ ಎಂದು. '60ರ ದಶಕದಲ್ಲಿ ಕೆನೆಡಿಯವರು ಕ್ಯೂಬಾದ ವಿರುದ್ಧ ಇದನ್ನು ಬಳಸಲು ಯತ್ನಿಸಿದ್ದರು. ಈಗ ನಿಕರಾಗುವಾದಲ್ಲಿ ಮೂಗು ತೋರಿಸುವ ತನ್ನ 'ಹಕ್ಕು' ಸಾಧಿಸಲು ರೇಗನ್ ಇದನ್ನು ಉದ್ಧರಿಸುತ್ತಿದ್ದಾರೆ. ಆದರೆ ಅಫಘಾನಿಸ್ತಾನದಲ್ಲಿ ಇವರಿಗೆ ಈ ಸಿದ್ಧಾಂತದ ಆಶ್ರಯವೂ ಇಲ್ಲ. ಆದ್ದರಿಂದ ನ್ಯಾಯದ ಮುಖವಾಡವನ್ನು ಕೂಡಾ ಧರಿಸುವುದನ್ನು ತೊರೆದು ಜಗತ್ತಿನಲ್ಲಿ ಪೋಲೀಸ್‌ಪೇದೆಯ ಪಾತ್ರ ವಹಿಸಲು ಸಿದ್ಧವಾಗಿದ್ದಾರೆ.

ಈ ಮಧ್ಯೆ ಪರ್ಷಿಯಾ ಕೊಲ್ಲಿಗೆ ತನ್ನ ನಾವಿಕ ಪಡೆಯನ್ನ ಕಳಿಸಿ ಆ ಪ್ರದೇಶಕ್ಕೂ ಸಾಮ್ರಾಜ್ಯಶಾಹೀ ಮನ್ರೋ ಸಿದ್ಧಾಂತವನ್ನು ವಿಸ್ತರಿಸುವ ಹವಣಿಕೆ ರೇಗನ್‌ಗಿದ್ದಂತಿದೆ. ಇರಾನ್‌ಗೆ ಶಸ್ತ್ರಾಸ್ತ್ರ, ಇರಾಕ್‌ಗೆ ಮಿಲಿಟರಿ ಗುಪ್ತಮಾಹಿತಿ ನೀಡಿ ಇರಾನ್-ಇರಾಕ್ ಮಧ್ಯೆ ನಿರಂತರ ಯುದ್ಧ ನಡೆಯುವಂತೆ ಮಾಡಿ ತನ್ನ ಶಸ್ತ್ರಾಸ್ತ್ರ ಮಾರಾಟ ಅಡೆತಡೆಯಿಲ್ಲದಂತೆ ಸಾಗುವಂತೆ ಇದುವರೆಗೆ ಅಮೆರಿಕಾ ನೋಡಿಕೊಂಡಿತ್ತು. ಈಗ ಈ ತೈಲಭರಿತ ಕ್ಷೇತ್ರದಲ್ಲಿ ತನ್ನ ಸಾಮ್ರಾಜ್ಯಶಾಹಿ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ನೇರವಾಗಿ ಮಧ್ಯ ಪ್ರವೇಶಿಸುತ್ತಿದೆ. ಪಶ್ಚಿಮ ಏಷ್ಯಾದ ಬಗ್ಗೆಯೂ ಬೆದರಿಕೆಯ ಮಾತುಗಳು ರೇಗನ್‌ರ ಈ ಭಾಷಣದಲ್ಲಿ ತುಂಬಿದ್ದವು. ○

# ● ದೇಶ - ವಿದೇಶ ●

## ಮತ್ತೊಂದು ಆಸ್ಫೋಟ ಭೂಮಿಗೇ ಮಾರಕ

ಇತ್ತೀಚಿಗೆ ನಡೆದ ಅಮೇರಿಕಾದ ಭೂಗತ ಅಣ್ವಸ್ತ್ರಗಳ ಪರೀಕ್ಷೆಗಳು ಸಂಪೂರ್ಣವಾಗಿ ಸ್ಟಾರ್‌ವಾರ್‌ಗೆ ಸಹಾಯ ಮಾಡುತ್ತದೆಂದು ವಿಜ್ಞಾನಿಗಳ ಕಾಂಗ್ರೆಸ್ ಅಭಿಪ್ರಾಯಪಟ್ಟಿದೆ 40 ದೇಶಗಳು ಭಾಗವಹಿಸಿದ್ದ ನಿಶ್ಶಸ್ತ್ರೀಕರಣ ಸಭೆಯಲ್ಲಿ ಮಾತನಾಡುತ್ತಿದ್ದ ಸ್ವೀಡನ್‌ನ ರಾಯಭಾರಿಬ್ರಿಟ್, ಅಂತರಾಷ್ಟ್ರೀಯ ನಿಶಸ್ತ್ರೀಕರಣದ ಒಪ್ಪಂದವನ್ನು ಈ ಪರೀಕ್ಷೆಗಳು ಕಲಕುತ್ತದೆ ಎನ್ನುತ್ತಾ ನೆವೆಡಾದಲ್ಲಿ ಕಳೆದ ಭಾರಿ ನಡೆದಿದ್ದ ಸ್ಫೋಟಗಳು ಹೊಸ ಸಿದ್ಧಾಂತಗಳಿಗೆ ಹಾದಿ ಮಾಡಿಕೊಟ್ಟಿತ್ತು. ಈ ಬಾರಿಯ ಸ್ಫೋಟಗಳು ಅದನ್ನು ಇನ್ನಷ್ಟು ಉದ್ವಿಗ್ನಗೊಳಿಸುತ್ತದೆ ಎಂದಿದ್ದಾರೆ.

ಸಭೆಯಲ್ಲಿ ಸೇರಿದ್ದ ಎಲ್ಲಾ ಪ್ರತಿನಿಧಿಗಳು ಅಮೇರಿಕಾದ ಪರೀಕ್ಷೆಯ ಪ್ರಯತ್ನಗಳನ್ನು ಖಂಡಿಸಿದರಲ್ಲದೆ ಗೊತ್ತುವಳಿ ಸ್ವೀಕರಿಸಿದರು.

ಆದರೂ ಸಹ ಈ ಎಲ್ಲಾ ವಿರೋಧವನ್ನು ಅಲಕ್ಷಿಸಿದ ಅಮೇರಿಕಾ ಸರ್ಕಾರದ ಅಣು ವಿಭಾಗದ ಪ್ರತಿನಿಧಿ 'ನಮ್ಮ ಪರೀಕ್ಷೆ ಸಂಪೂರ್ಣವಾಗಿ ಫಲದಾಯಕವಾಗಿತ್ತು' ಎಂದು ತಮ್ಮ ಹರ್ಷ ವ್ಯಕ್ತಪಡಿಸಿದ್ದಾರೆ. ●

# ಗೌಹಾಯತಿಲ್ಲಿ ರೈತರ ಬೃಹತ್ ರ್‍ಯಾಲಿ

ಪ್ರತ್ಯೇಕತಾವಾದೀ ಮತಪ್ರದರ್ಶನಗಳನ್ನು ಕಾಣುತ್ತಿದ್ದ ಗೌಹಾತಿ ನಗರ ಜನವರಿ 28ರಂದು ಒಂದು ಭಿನ್ನ ಮಾದರಿಯ ಭಾರೀ ಮತಪ್ರದರ್ಶನವನ್ನು ಕಂಡಿತು. ಅಸ್ಸಾಂನ 17ಜಿಲ್ಲೆಗಳಿಂದ 250ಬಸ್ಸುಗಳಲ್ಲಿ ಬಂದ ಸಾವಿರಾರು ರೈತರು ಬುಡಕಟ್ಟುಗಳು, ಅಸ್ಸಾಮೀ ಹಿಂದೂ, ವಲಸೆ ಬಂದ ಮುಸ್ಲಿಮರು, ಬಂಗಾಲೀ ಹಿಂದೂಗಳು, ಮಹಿಳೆಯರು ಎಂಬ ಯಾವ ಭೇದ-ಭಾವವೂ ಇಲ್ಲದೆ ಹೆಗಲಿಗೆ ಹೆಗಲುಕೊಟ್ಟು ತಮ್ಮ ಬೇಡಿಕೆಗಳಿಗಾಗಿ ಗೌಹಾತಿಯ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಹಲವಾರು ಕಾರ್ಮಿಕ ಸಂಘಗಳು ಹಾಗೂ ನೌಕರರು ರೈತರಿಗೆ ಬೆಂಬಲ ನೀಡಲು ಮೂರು ಕಿಲೋಮೀಟರ್ ಉದ್ದದ ಮೆರವಣಿಗೆಯಲ್ಲಿ ಹಾಗೂ ನಂತರ ನಡೆದ ಭಾರೀ ಸಾರ್ವಜನಿಕ ಸಭೆಯಲ್ಲಿ ಪಾಲುಗೊಂಡರು.

ರೈತರ ಬೆಂಬಲಪಡೆದು ಅಧಿಕಾರಕ್ಕೆ ಬಂದ ಎ.ಜಿ.ಪಿ. ಸರಕಾರ ನಂತರ ತಾನು ರೈತರಿಗೆ ನೀಡಿದ ವಚನಗಳನ್ನು ಮರೆಯಿತು ಮಾತ್ರವಲ್ಲ ಭೂಮಿತಿ ಕಾನೂನ್ನು ಭೂಮಾಲಕರು ಹಾಗೂ ಪ್ಲಾಂಟರುಗಳ ಪರವಾಗಿ ತಿದ್ದುಪಡಿ ಮಾಡಿತು, ಅಸ್ಸಾಂ ಗೇಣಿ ಕಾನೂನಿನ ಗೇಣಿದಾರರ ಪರವಾದ ಅಂಶಗಳನ್ನು ಬಹಿರಂಗವಾಗಿಯೇ ಟೀಕಿಸಲಾರಂಭಿಸಿತು. ಇವನ್ನು ವಿರೋಧಿಸಿ ಅಸ್ಸಾಂ ರಾಜ್ಯ ಕಿಸಾನ್ ಸಭಾ ಈ ರ್‍ಯಾಲಿಗೆ ಕರೆ ನೀಡಿತ್ತು. ಇದಕ್ಕೆ ದೊರೆತ ಪ್ರತಿಕ್ರಿಯೆ ಬಹಳ ಉತ್ಸಾಹದಾಯಕ ಹಾಗೂ ಐಕ್ಯ ಚಳುವಳಿಗೆ ಆಶಾದಾಯಕವಾಗಿತ್ತು.

ಪತ್ರಿಕೆಗಳು ಕೂಡಾ ಅಸ್ಸಾಂನಲ್ಲಿ ಎ.ಜಿ.ಪಿ. ಹಾಗೂ ಅದರ ಚಳುವಳಿಗಾರರಲ್ಲದೆ ಇತರರ ಬಗ್ಗೆ ಇದ್ದ ಅಸಹನೆ ಕ್ರಮೇಣ ಮಾಯವಾಗುತ್ತಿದೆ ಎಂಬುದನ್ನು ಈ ರ್‍ಯಾಲಿ ತೋರಿಸಿಕೊಟ್ಟಿದೆ ಎಂದು ಹೇಳಿವೆ. ○

# ಕಾಂಗ್ರೆಸ್‌ನ [ಐ] ಹಿಂಸಾಚಾರ

ಇನ್ನೇನು ವಿಧಾನಸಭಾ ಚುನಾವಣೆಗಳಿಗೆ ದಿನಾಂಕ ಗೊತ್ತುಪಡಿಸಲಾಗುತ್ತದೆ ಎಂಬಷ್ಟರಲ್ಲೇ ಪ.ಬಂಗಾಳದ ಕಾಂಗ್ರೆಸ್ [ಐ] ಹಿಂಸಾಚಾರಗಳ ಮೂಲಕ ತನ್ನ ಪ್ರಚಾರ ಆರಂಭಿಸಿಯೇ ಬಿಟ್ಟಿದೆ. ರಾಜ್ಯದಲ್ಲಿ ಕಾನೂನು ವ್ಯವಸ್ಥೆಯ ಬಗ್ಗೆ ಪ್ರಧಾನ ಮಂತ್ರಿಗಳ ಉಪದೇಶಮಾಲೆಯ ಬೆನ್ನ ಹಿಂದೆಯೇ ಇದು ಆರಂಭವಾಗಿದೆ"ಕಾನೂನು ವ್ಯವಸ್ಥೆಯ ಮರುಸ್ಥಾಪನೆ"ಯ ಹೆಸರಿನಲ್ಲಿ.

ಇದು ಆರಂಭಗೊಂಡದ್ದು ಕಲ್ಕತ್ತಾ ಮಹಾನಗರಪಾಲಿಕೆಯ ಘಟನೆಯಿಂದ. ಒಬ್ಬ ಸಿ.ಪಿ ಐ.[ಎಂ] ಕೌನ್ಸಿಲರ್ ನಿಧನರಾದ ಸಂದರ್ಭದ ದುರುಪಯೋಗ ಪಡೆದು ಕಾಂಗ್ರೆಸ್[ಐ] ಒಬ್ಬ ಎಡ-ರಂಗ ಬೆಂಬಲಿಗ ಸ್ವತಂತ್ರ ಕೌನ್ಸಿಲರನ್ನು ತನ್ನ ಬಲಿಗೆ ಬೀಸಿ ಎಡರಂಗ ಬಹುಮತ ಕಳೆಕೊಳ್ಳುವಂತೆ ಮಾಡಿದರು. ಈ ಬಗ್ಗೆ "ಅವಿಶ್ವಾಸ ಗೊತ್ತುವಳಿ" ತಂದು ಅದಕ್ಕೆ ಗೊತ್ತುಪಡಿಸಿದ ಸಮಯಾವಧಿ ಮುಗಿದ ಕೂಡಲೇ ಕಾಂಗ್ರೆಸ್[ಐ] ಕೌನ್ಸಿಲರ್‌ಗಳು ಗೂಂಡಾಗಿರಿಗಿಳಿದರು. ಎಡರಂಗದ ಕೌನ್ಸಿಲರ್‌ಗಳ ಮೇಲೆ ಹಲ್ಲೆ ನಡೆಸಿದರು ನಗರಪಾಲಿಕೆಯ ಕಟ್ಟಡದ ಕೋಣೆ-ಕೋಣೆಗೆ ಹೊಕ್ಕು ಪೀಠೋಪಕರಣಗಳನ್ನು ಮುರಿದರು, ನಗರಪಾಲಿಕೆಯ ಅಧ್ಯಕ್ಷರ ಮೇಲೆ ಹಲ್ಲೆಮಾಡಿ ಪ್ರಜ್ಞಾಹೀನರನ್ನಾಗಿಸಿದರು. ಅದೇ ವೇಳೆಗೆ ಹೊರಗಡೆ ಕಾಂಗ್ರೆಸ್ಸಿಗರ ಅವ್ಯಾಹತ ಕಲ್ಲು ತೂರಾಟ. ಅಮೇಲೆ ಯಥಾಪ್ರಕಾರ ಪಿ.ಸಿ.ಸಿ.[ಐ] ಮುಖಂಡರ ಬೊಬ್ಬೆ.

ಇದೇ ಮಾದರಿ ನಂತರ ಪುರುಲಿಯಾ, ಬೆಹರ್‌ಂಪುರ್, ಕೂಚ್ ಬಿಹಾರ್ ಇತ್ಯಾದಿ ಜಿಲ್ಲಾ ಪಟ್ಟಣಗಳಲ್ಲಿ "ಅಹಿಂಸಾತ್ಮಕ" ಕಾರ್ಯಕ್ರಮದ ಪುನರಾವರ್ತನೆ. ಈ ಕಾರ್ಯಕ್ರಮ ವಿಧಾನಸಭಾ ಚುನಾವಣೆಗಳವರೆಗೂ ಮುಂದುವರಿಯುತ್ತದೆಂದು ಧೈರ್ಯವಾಗಿ ಭವಿಷ್ಯ ನುಡಿಯಬಹುದು. ಮತ್ತೊಮ್ಮೆ ತನ್ನ ಪ್ರತಿಗಾಮೀ ಸ್ವಭಾವವನ್ನು ಕಾಂಗ್ರೆಸ್ [ಐ] ಬಂಗಾಳದ ಜನತೆಯ ಮುಂದೆ ಪ್ರದರ್ಶಿಸುತ್ತಿದೆ.

## ಪಾವಗಡದಲ್ಲಿ ಪೋಲೀಸ್ ಹತ್ಯಾಕಾಂಡ

(1ನೇ ಪುಟದಿಂದ)

ಕಾರದ ಪೋಲೀಸರು ಜನರೊಡನೆ ಸಂಯಮದಿಂದ ವರ್ತಿಸುತ್ತಿರುವಾಗ ಕೆಲವು ಸಲ ಪರಿಸ್ಥಿತಿ ವಿಕೋಪಕ್ಕೆ ಹೋದರೂ ಅದನ್ನು ಚಾಣಾಕ್ಷತನದಿಂದ ಎದುರಿಸುವ ಮನೋಭಾವನೆ ಹೊಂದಿರುವಾಗ ಕರ್ನಾಟಕದ ಪೋಲೀಸರು ರಾಕ್ಷಸರಂತೆ ಅಮಾನವೀಯವಾಗಿ ಏಕೆ ವರ್ತಿಸುತ್ತಾರೆ. ಅದಕ್ಕೆ ಆಳುವ ಪಕ್ಷದ ನೀತಿ ನಿರೂಪಣೆಯೇ ಕಾರಣವಲ್ಲವೇ ?

ಇಂತಹ ಘಟನೆಗಳು ನಡೆದು ವಿನಾಕಾರಣ ನಿರಪರಾಧಿ ಜನ ಪೋಲೀಸರ ಗುಂಡಿಗೆ ಬಲಿಯಾಗುವುದು ತಪ್ಪಬೇಕು. ಪೋಲೀಸರ ದೌರ್ಜನ್ಯದಿಂದ ಗಂಭೀರ ಪರಿಸ್ಥಿತಿ ಉಂಟಾದಾಗ ಸಮಾಜದ್ರೋಹಿಗಳು ಅದರ ದುರುಪಯೋಗ ಮಾಡಿಕೊಂಡು ಪರಿಸ್ಥಿತಿಯನ್ನು ಹದಗೆಡಿಸದಂತೆ ನೋಡಿಕೊಳ್ಳುವುದು ಜನತೆಯ ಕರ್ತವ್ಯ.

ಪೋಲೀಸರ ವರ್ತನೆ ಕುರಿತು ಸರ್ಕಾರ ಹೆಚ್ಚು ಗಮನ ಹರಿಸುವುದು ಅಗತ್ಯ, ಯಾಕೆಂದರೆ ಪಾವಗಡದಲ್ಲಿ ಪೋಲೀಸರ ವರ್ತನೆಯನ್ನು ಯಾರೂ ಸಹಿಸಲಿಕ್ಕೆ ಸಾಧ್ಯವಿಲ್ಲ. ಅದು ಅತ್ಯಂತ ಹೇಯವಾಗಿದೆ. ಕೊಲೆಗಾರರ ಜಾತಿಗೆ ಆ ಪೋಲೀಸರನ್ನು ಸೇರಿಸಬಹುದಾಗಿದೆ. ಪಾವಗಡ, ಗುರುಮಿಟ್ಕಲ್, ಮೈಸೂರು ತುಮಕೂರಿನಲ್ಲಿಯಂತ ಪೋಲೀಸ್ ವರ್ತನೆಯಿಂದ ಇಡೀ ರಾಜ್ಯದ ಪೋಲೀಸರ ಮೇಲೆ ಕೆಟ್ಟ ಹೆಸರು ಬರುವುದರಲ್ಲಿ ಸಂಶಯವಿಲ್ಲ. ಹಾಗಾಗ ಬಾರದೆಂಬೇ ನಮ್ಮ ಅಪೇಕ್ಷೆ ದರೋಡೆಖೋರರತ್ತ, ಸಮಾಜ ದ್ರೋಹಿಗಳತ್ತ ಪೋಲೀಸರಗಮನ ಹರಿಯಲಿ. ನಾಗರೀಕರಿಗೆ ಸಂರಕ್ಷಣೆ ನೀಡುವಲ್ಲಿ ದಕ್ಷತೆ ತೋರಿಸಲೆಂದು ನಮ್ಮ ಅನಿಸಿಕೆ.

### ರಾಜ್ಯ ಸಮಿತಿ ಖಂಡನೆ

ತುಮಕೂರು ಜಿಲ್ಲೆಯ ಪಾವಗಡದಲ್ಲಿ ಮಂಗಳವಾರ ಪೋಲೀಸರು ನಡೆಸಿದ ಗೋಳಿಬಾರನ್ನು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಬಲವಾಗಿ ಖಂಡಿಸುತ್ತದೆ. ಈ ಗೋಳಿಬಾರಿನಲ್ಲಿ ಏಳು ಜನ ಸತ್ತಿದ್ದು ಹಲವಾರು ಜನ ಜಖಂಗೊಂಡಿದ್ದಾರೆ. ಯಾವ ಎಚ್ಚರಿಕೆಯನ್ನೂ ನೀಡದೆ ಆ ರೀತಿ ಗೋಳಿಬಾರು ಮಾಡಿ ನರಹತ್ಯೆಗೆ ಕಾರಣೀಭೂತರಾಗಿರುವ ಪೋಲೀಸರ ಕ್ರಮ ಅನಾಗರೀಕತೆಯ ಪರಾಕಾಷ್ಠೆ. ಪೋಲೀಸರ ನಡತೆಯ ಕುರಿತು ಜನತಾ ಸರ್ಕಾರ ಹೆಚ್ಚು ಗಮನ ಹರಿಸುವುದು ಅಗತ್ಯ.

ಮೃತಪಟ್ಟವರಿಗೆ ಸಿ.ಪಿ.ಐ. (ಎಂ) ಸಂತಾಪ ವ್ಯಕ್ತಮಾಡಿ, ಅವರ ಕುಟುಂಬದವರ ದುಃಖದಲ್ಲಿ ತಾನೂ ಸಹಭಾಗಿಯಾಗುತ್ತದೆ. ಸತ್ತವರ ಕುಟುಂಬದವರಿಗೆ ಯೋಗ್ಯ ಪರಿಹಾರ ಕೊಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತದೆ.

## ನಾಮಕರಣ ಸಲ್ಲದು

(1ನೇ ಪುಟದಿಂದ)

ಜಿಲ್ಲಾ ಪರಿಷತ್ ಅಧ್ಯಕ್ಷ-ಉಪಾಧ್ಯಕ್ಷರ ಚುನಾವಣೆಯ ಜೊತೆಯಲ್ಲಿಯೇ ಮಂಡಲ ಪಂಚಾಯತ್ ಪ್ರಧಾನ-ಉಪಪ್ರಧಾನರ ಚುನಾವಣೆಯ ದಿನಾಂಕಗಳನ್ನು ಆಯಾ ಜಿಲ್ಲಾಧಿಕಾರಿಗಳು ಪ್ರಕಟಿಸಿದ್ದರು. ಜನತಾ ಪಕ್ಷದ ಶಾಸಕರ ಒತ್ತಡದಿಂದ ಅದನ್ನು ರದ್ದುಪಡಿಸಲಾಗಿದೆ. "ನಿಯಮವನ್ನು ಪೂರ್ಣ ಅರ್ಥಮಾಡಿಕೊಳ್ಳದೆ ಕೆಲವು ಜಿಲ್ಲಾಧಿಕಾರಿಗಳು ಅಂಥ ಕಾರ್ಯಕ್ರಮವನ್ನು ಈಗಾಗಲೇ ಹಾಕಿಕೊಂಡಿದ್ದಾರೆಂದು"ಹೇಳಿ ಅವರ ಮೇಲೆ ಸುಳ್ಳೇ ಗೂಬೆ ಕೂಡಿಸಲಾಗಿದೆ. ಪ್ರಾತಿನಿಧ್ಯ ದೊರಕದ ಹಿಂದುಳಿದ ವರ್ಗಗಳಿಂದ ಇಬ್ಬರನ್ನು ಜಿಲ್ಲಾ ಪರಿಷತ್ ನಾಮಕರಣ ಮಾಡಬೇಕಾಗಿದೆ. ನಾಮಕರಣದ ಅಧಿಕಾರವನ್ನು ಜಿಲ್ಲಾ ಪರಿಷತ್ತಿಗೆ ಕೊಡದೆ, ಸರಕಾರವೇ ಮಾಡಬೇಕೆಂಬ ಒತ್ತಾಯವೂ ಬರುತ್ತಿದೆ. ಇಬ್ಬರ ಬದಲು ಮೂವರನ್ನು ನಾಮಕರಣ ಮಾಡಬೇಕೆಂಬ ಒತ್ತಾಯವೂ ಇದೆ.

ಇದೆಲ್ಲ ಏನು ತೋರಿಸುತ್ತದೆ? ಜಿಲ್ಲಾ ಪರಿಷತ್ ಮಂಡಲ ಪಂಚಾಯತ್ ವ್ಯವಸ್ಥೆಯನ್ನು ಪ್ರಥಮಬಾರಿ ಅನುಷ್ಠಾನದಲ್ಲಿ ತರುವಾಗ ಉಂಟಾದ ಪ್ರಸವ ವೇದನೆ ಇದಲ್ಲವೆಂಬುದು ಸ್ಪಷ್ಟ. ಪಟ್ಟಭದ್ರ ಹಿತಾಸಕ್ತಿಗಳ, ಜಾತೀವಾದಿ ಮುಖಂಡರ ಅಭಿಲಾಶೆ, ಅಧಿಕಾರ ಸ್ಥಾನಗಳನ್ನು ತಮ್ಮವರಿಗೆ ಕೊಡಿಸುವ ಒಳಸಂಚು ಇದರಲ್ಲಿ ಅಡಕವಾದಂತಿದೆಂಬುದರಲ್ಲಿ ಏನೂ ಸಂಶಯವಿಲ್ಲ. ಪ್ರಜಾಪ್ರಭುತ್ವ ರೀತಿಯಲ್ಲಿ ಚುನಾವಣೆಯಲ್ಲಿ ಆರಿಸಿ ಬಂದಂತಾ ಸದಸ್ಯರೇ ಜಿಲ್ಲಾ ಪರಿಷತ್ತಿನ ಅಧ್ಯಕ್ಷ-ಉಪಾಧ್ಯಕ್ಷರನ್ನು ಆರಿಸುವ ಅಧಿಕಾರ ಹೊಂದಿರಬೇಕು. ಹಾಗೆಯೇ ಮಂಡಲ ಪಂಚಾಯತಿಯ ಪ್ರಧಾನ-ಉಪಪ್ರಧಾನರ ಚುನಾವಣೆ ಕೂಡಾ ನಡೆಯಬೇಕು. ನಾಮಕರಣ ಸದಸ್ಯರನ್ನು ಮಾಡುವುದು ಜನಾಭಿಪ್ರಾಯಕ್ಕೆ, ಜನತಂತ್ರಕ್ಕೆ ವಿರೋಧವಾದ ಪದ್ಧತಿ. ಜನತಾ ಪಕ್ಷಕ್ಕೆ ನಿಜವಾಗಿಯೂ ಮೌಲ್ಯಾಧಾರಿತ ರಾಜಕಾರಣ ಬೇಕಾದರೆ ತನ್ನ ಪಕ್ಷದಲ್ಲಿರುವ ಪಟ್ಟಭದ್ರ ಹಿತಾಸಕ್ತಿಗಳ ಒತ್ತಡಕ್ಕೆ ಮಣಿಯದೆ ಮೌಲ್ಯವನ್ನು ಕಾಪಾಡಿಕೊಂಡು ಹೋಗುವುದು ಅತ್ಯಗತ್ಯ.

## ಪಾವಗಡದಲ್ಲಿನ ಪೋಲೀಸ್ ದೌರ್ಜನ್ಯ

### ಪ್ರಾಂತ ರೈತ ಸಂಘದ ಖಂಡನೆ

ತುಮಕೂರು ಜಿಲ್ಲೆಯ ಪಾವಗಡದಲ್ಲಿ ದಿನಾಂಕ 15-16ರಲ್ಲಿ ಪೋಲೀಸರು ರೈತರು ಮತ್ತು ಜನರ ಮೇಲೆ ನಡೆಸಿದ ದೌರ್ಜನ್ಯ ಹಾಗೂ ಗೋಲಿಬಾರ್‌ನಲ್ಲಿ ಸುಮಾರು 7 ಜನರು ಸತ್ತು ಹಲವು ಜನ ಗಾಯಗೊಂಡು ಚಿಂತಾಜನಕವಾಗಿ ಆಸ್ಪತ್ರೆ ಸೇರಿರುವುದನ್ನು ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ರಾಜ್ಯ ಸಮಿತಿಯು ತೀವ್ರವಾಗಿ ಖಂಡಿಸಿ ಇದು ಜನತಾ ಸರ್ಕಾರ ಕೂಡ ಸರ್ವಾಧಿಕಾರಿ ಕಾಂಗ್ರೆಸ್ ದಾರಿಯನ್ನೇ ಹಿಡಿಯುತ್ತಿರುವ ಸ್ಥಿತಿಯನ್ನು ಎತ್ತಿ ತೋರಿಸುತ್ತದೆ ಎಂದು ಹೇಳಿದೆ.

ಆದ್ದರಿಂದ ಸರ್ಕಾರ ತನಿಖೆ ಹಾಗೂ ಪೋಲೀಸ್ ಅಧಿಕಾರಿಗಳನ್ನೂ ಸಸ್ಪೆಂಡ್ ಮತ್ತು ವರ್ಗಾವಣೆ ಮಾಡಿದರೆ ಸಾಲದು ಅವರ ಮೇಲೆ ಉಗ್ರ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆಂದು ಮತ್ತು ಸತ್ತವರ ಕುಟುಂಬಗಳಿಗೆ ಹಾಗೂ ಇತರ ಗಾಯಾಳುಗಳಿಗೆ ಹೆಚ್ಚು ಪರಿಹಾರ ಒದಗಿಸಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿಯು ಒತ್ತಾಯಿಸಿದೆ.

ರಾಜ್ಯದಲ್ಲಿ ದರೋಡೆಗಳು ನಡೆಯುತ್ತಿದ್ದು ಅದನ್ನು ನಿಲ್ಲಿಸುವುದಕ್ಕೆ ಬದಲಾಗಿ ದಾರಿ ಹೋಕರಾದ ನಿರಪರಾಧಿ ಪದ್ಮಮ್ಮ, ನಾರಾಯಣಸ್ವಾಮಿಯಂತಹವರನ್ನು ಲಾಕಪ್ಪಿಗೆ ಹಾಕಿ ಚಿತ್ರಹಿಂಸೆ ನೀಡಿರುವುದು ಖಂಡನೀಯವಾಗಿದೆ. ಹಾಗೂ ರಾಜ್ಯದ ಜನತಾ ಸರ್ಕಾರ ಪರಿಪೂರ್ಣ ಜವಾಬ್ದಾರಿ ಹೊರಬೇಕಾಗುತ್ತದೆ ಎಂದು ರೈತ ಸಂಘದ ಮುಖಂಡ ಕಾಂ| ಪಿ. ಜಗನ್ನಾಥ್ ಆರೋಪಿಸಿರುತ್ತಾರೆ. ○

## "ಖಾಲ್ಸಾಪಂಥ ಒಂದು ಸ್ವತಂತ್ರ ಪ್ರತ್ಯೇಕ ರಾಷ್ಟ್ರ" -ಪ್ರಧಾನ ಅರ್ಚಕರು

(1ನೇ ಪುಟದಿಂದ)

ಅಕಾಲಿದಳ ಸ್ವರ್ಣಮಂದಿರ ಮತ್ತು ಇತರ ಧಾರ್ಮಿಕ ಸ್ಥಳಗಳಿಗೆ ರಕ್ಷಣಾ ಸೈನ್ಯ ಕಳುಹಿಸುವಂತಿಲ್ಲ. ಅದನ್ನು ಆ ಪಕ್ಷ ವಿರೋಧಿಸುವುದು ಹಾಗೆಯೇ ಪಂಜಾಬಿನಲ್ಲಿಯ ಕ್ಯಾದೆ ಕಾನೂನು ವ್ಯವಸ್ಥೆಯಲ್ಲಿ ಕೇಂದ್ರ ಕೈಹಾಕುವುದನ್ನು ಸಹಿಸುವಂತಿಲ್ಲ. ಅಕಾಲಿದಳ ಕೇಂದ್ರದ ಅರೆ ಸೈನಿಕರನ್ನು ಅವಲಂಬಿಸದೆ ಕ್ಯಾದೆ ಕಾನೂನಿನ ಸಮಸ್ಯೆಯನ್ನು ಪಂಜಾಬೀ ಪೋಲೀಸರಿಗೆ ಮಾತ್ರ ಒಪ್ಪಿಸುವುದು ಎಂದಿದೆ. ಅದು ಖಲಿಸ್ತಾನ ಎಂಬ ಶಬ್ದವನ್ನು ಉಪಯೋಗಿಸದಿದ್ದರೂ ಕೂಡಾ "ಖಾಲ್ಸಾ ಪಂಥ ಒಂದು ಸ್ವತಂತ್ರ ಪ್ರತ್ಯೇಕ ರಾಷ್ಟ್ರ. ಖಾಲ್ಸಾ ಸ್ಥಾಪಿಸುವುದೇ ಅದರ ಗುರಿ. ಪಂಥದ ಪ್ರತ್ಯೇಕತೆಯನ್ನು ಉಳಿಸಿ ಸಿಖ್ ಜನರ ಭಾವನೆಗಳ ಪ್ರತೀಕವಾದ ಭೌಗೋಲಿಕ-ರಾಜಕೀಯ ವಾತಾವರಣ ಉಂಟುಮಾಡುವುದೇ ಅಕಾಲಿದಳದ ಮುಖ್ಯ ಉದ್ದೇಶ ಎಂದು ಸಾರಿದೆ. ಗುರುದ್ವಾರಗಳ ಮೇಲೆ ಶಿರೋಮಣಿ ಅಕಾಲಿದಳದ [ಎಸ್.ಜಿ.ಪಿ.ಸಿ.] ಮೇಲ್ವಿಚಾರಣೆಯನ್ನು ಅದು ಒಪ್ಪುತ್ತಿಲ್ಲ.

ಸಾಮ್ರಾಜ್ಯಶಾಹಿಗಳ ಏಜಂಟರಿಂದ ಗುರುದ್ವಾರಗಳನ್ನು ವಿಮೋಚನೆಗೊಳಿಸುವ ಕಾರ್ಯದಲ್ಲಿ ಶಿರೋಮಣಿ ಅಕಾಲಿದಳದ ಸ್ಥಾಪನೆ ಅಕಾಲಿದಳದ ಅತಿ ದೊಡ್ಡ ಸಾಧನೆಯಾಗಿದೆ. ಅರ್ಚಕರು ಈ ಮಹಾಸಾಧನೆಯನ್ನು ನಾಶಮಾಡಲು ಹೊರಟಿದ್ದಾರೆ. ಹೊಸತಾಗಿ ರಚಿಸಲ್ಪಟ್ಟ ಈ ಪಂಥದ ಕಮಿಟಿ "ಖಲಿಸ್ತಾನ ತಾತ್ಕಾಲಿಕ ಸರಕಾರ" ರಚಿಸುವ ಉದ್ದೇಶವನ್ನು ಪ್ರಕಟಿಸಿತ್ತು.

ಅದರ ಸಾಧನೆಗಾಗಿಯೇ, ಬರ್ನಾಲಾ ಸರಕಾರವನ್ನು ಉರುಳಿಸಿ, ಭಯೋತ್ಪಾದಕರ ಸರಕಾರ ಸ್ಥಾಪಿಸುವುದರ ಸಲುವಾಗಿಯೇ ಎಲ್ಲಾ ಅಕಾಲಿದಳದ ಗುಂಪುಗಳೂ ತಮಗೆ ಶರಣಾಗಬೇಕೆಂಬ ಹುಕುಂನಾಮೆ ಹೊರಡಿಸಿ, ಅದಕ್ಕೆ ಒಪ್ಪದ ಬರ್ನಾಲಾ ಅವರನ್ನು ಧರ್ಮ ಭ್ರಷ್ಟನೆಂದು ಸಾರಿ, ಇತರರ ಮೇಲೂ ಅಂಥ "ಶಿಕ್ಷೆ" ವಿಧಿಸುವ ಹೊಂಚಿನಲ್ಲಿದ್ದಾರೆ.

ಪಂಜಾಬಿನಲ್ಲಿ ಈಗ ಗಂಭೀರ ಪರಿಸ್ಥಿತಿ ಉಂಟಾಗಿದೆ. ಗುರುದ್ವಾರಗಳು ಭಯೋತ್ಪಾದಕರವಶದಲ್ಲಿದೆ. ಹಲವಾರು ಅಕಾಲಿದಳದ ಗುಂಪುಗಳು ಛಿದ್ರಕಾರಿಗಳನ್ನು ಸೇರಿಕೊಂಡಿವೆ. ರಾಷ್ಟ್ರ ವಿರೋಧಿ ಚಟುವಟಿಕೆಗಳ ಸಲುವಾಗಿ ಸರಬತ್ ಖಾಲ್ಸಾ ಮತ್ತು ಅಕಾಲಿ ತಖ್ತ್‌ಗಳನ್ನು ಉಪಯೋಗಿಸುತ್ತಿರುವುದನ್ನು ಕೂಡಲೇ ತಡೆಯಬೇಕು.

ಪ್ರಜಾಪ್ರಭುತ್ವ ಶಕ್ತಿಗಳೆಲ್ಲಾ ಒಂದಾಗಿ ಛಿದ್ರಕಾರಿಗಳ ವಿರುದ್ಧ ಹೋರಾಡಿ ದೇಶದ ಐಕ್ಯತೆಯನ್ನು ಉಳಿಸುವ ಜವಾಬ್ದಾರಿಯನ್ನು ಹೊರಬೇಕಾಗಿದೆ. ಸಿಖ್, ಹಿಂದೂ, ಕ್ರಿಶ್ಚನ್, ಮುಸ್ಲಿಂ ಮೊದಲಾದ ಧಾರ್ಮಿಕ ಸಂಸ್ಥೆಗಳೆಲ್ಲ, ಧರ್ಮದ ಹೆಸರಿನಲ್ಲಿ ದೇಶದ ಐಕ್ಯತೆಗೆ ಸವಾಲನ್ನೊಡ್ಡಿದ್ದಾದರೆ ಭಾರತ ದೇಶ ಎಲ್ಲಿ ಉಳಿಯುತ್ತದೆ? ಅಂಥ ಧಾರ್ಮಿಕ ಶಕ್ತಿಗಳ ವಿರುದ್ಧ ವಿಚಾರವಂತರು ಹೋರಾಡಲೇಬೇಕು. ದೇಶದ ಐಕ್ಯತೆ ನಮಗೆ ಪ್ರಧಾನ. ಧಾರ್ಮಿಕ ಪಟ್ಟಭದ್ರ ಹಿತಾಸಕ್ತಿಗಳು ದೇಶದ ಐಕ್ಯತೆಗೆ ಮಾರಕವಾಗಿವೆ. ಜಾತೀಯ ಸೌಹಾರ್ದತೆಯ, ಸಾಮ್ರಾಜ್ಯಶಾಹಿಗಳ ವಿರುದ್ಧ ದೇಶದ ಸ್ವಾತಂತ್ರ್ಯ ಹೋರಾಟದ ಶ್ರೀಮಂತ ಪರಂಪರೆ ಉಳ್ಳ ಪಂಜಾಬಿನ ಜನತೆ ಈ ಭಯೋತ್ಪಾದಕ ಛಿದ್ರಕಾರಿಗಳನ್ನು ಧೈರ್ಯದಿಂದ ಹೋರಾಡಬೇಕು, ಅವರ ಸವಾಲನ್ನು ಸ್ವೀಕರಿಸಬೇಕು.

ಇಂಥ ಗಂಭೀರ ಪರಿಸ್ಥಿತಿಯಲ್ಲಿ ತಮ್ಮ ಜೀವದ ಹಂಗು ಬಿಟ್ಟು ಕಾರ್ಮಿಕರೂ ಹಾಗೆಯೇ ಎಷ್ಟೋ ಯುವಕರೂ ಮುದುಕರೂ ಜೀವಕೊಟ್ಟು, ಛಿದ್ರಕಾರಿಗಳ ಸವಾಲನ್ನು ಸ್ವೀಕರಿಸಿ ಎದೆಕೊಟ್ಟು ನಿಂತಿದ್ದಾರೆ. ಯುವಕರೂ, ವಿದ್ಯಾರ್ಥಿಗಳೂ ಭಯೋತ್ಪಾದಕರನ್ನು ದುಡಿಸಲು ಮುಂದೆ ಬಂದಿದ್ದಾರೆ.

ಛಿದ್ರಕಾರಿಗಳ ಪ್ರಶ್ನೆ ಬರೇ ಪಂಜಾಬಿಗಷ್ಟೇ ಸೀಮಿತವಾಗಿಲ್ಲ. ಆದ್ದರಿಂದ ಪಂಜಾಬಿನಲ್ಲಿ ಅವರನ್ನು ಪ್ರತ್ಯೇಕಿಸಿ, ಅವರಿಂದ ಪಂಜಾಬನ್ನು ಉಳಿಸಿದರೆ, ಇಡೀ ದೇಶದಲ್ಲೇ ಅವರ ಶಕ್ತಿ ನಾಶ ಮಾಡಲು ಸಾಧ್ಯವಾಗುತ್ತದೆ. ಆದ್ದರಿಂದ ಪಂಜಾಬಿ ಪ್ರಶ್ನೆ ಇಡೀ ದೇಶದ ಐಕ್ಯತೆಯ ಪ್ರಶ್ನೆ. ದೇಶದ ಸಮಗ್ರ ಜನತೆ ಅಮೇರಿಕನ್ ಸಾಮ್ರಾಜ್ಯಶಾಹಿಯ ಬೆಂಬಲದಿಂದ ಪಂಜಾಬನ್ನು ಭಾರತದಿಂದ ಪ್ರತ್ಯೇಕಿಸುವ ಒಳಸಂಚನ್ನು ಬಯಲಿಗೆಳೆದು ಭಯೋತ್ಪಾದಕರನ್ನು ಪ್ರತ್ಯೇಕಿಸುವ ಜವಾಬ್ದಾರಿ ಹೊರಬೇಕು. ಕಾಲ ಇನ್ನೂ ಮೀರಿಲ್ಲ ಜನತೆ ಎಚ್ಚರಗೊಂಡು ಕಾರ್ಯ ಪ್ರವೃತ್ತರಾಗಲಿ. ●

## ಪೌರ ಕಾರ್ಮಿಕರ ಹೋರಾಟಕ್ಕೆ ಬೆಂಬಲ

ಕರ್ನಾಟಕ ರಾಜ್ಯ ಪೌರ ಕಾರ್ಮಿಕರ ಒಕ್ಕೂಟದ ಅಧ್ಯಕ್ಷರಾದ ಎನ್.ಕೆ. ಉಪಾಧ್ಯಾಯರು ಪತ್ರಿಕಾ ಹೇಳಿಕೆ ನೀಡಿ ಫೆಬ್ರವರಿ 5ರಿಂದ ರಾಜ್ಯಾದ್ಯಂತ ಮುಷ್ಕರ ಹೂಡುತ್ತಿರುವ ಪೌರಕಾರ್ಮಿಕರ ಮುಷ್ಕರಕ್ಕೆ ಬೆಂಬಲ ನೀಡಿ ಹದಿಮೂರು ದಿವಸಗಳಿಂದ ನಡೆಯುತ್ತಿರುವ ಮುಷ್ಕರದ ಕುರಿತು ರಾಜ್ಯ ಸರ್ಕಾರ ಯಾವುದೇ ಗಮನ ಹರಿಸದೆ ಮಲತಾಯಿ ಧೋರಣೆ ಅನುಸರಿಸುತ್ತಿರುವುದನ್ನು ಬಲವಾಗಿ ಖಂಡಿಸಿದ್ದಾರೆ. ನಗರ ಸಭೆಗಳಿಂದ 4-5 ತಿಂಗಳವರೆಗೆ ವೇತನ ಪಡೆಯಲು ಸಾಧ್ಯವಾಗದೆ ಗಂಭೀರ ಪರಿಸ್ಥಿತಿಯಲ್ಲಿರುವಾಗ ಜೀವನ ನಡೆಸುವುದೇ ದೊಡ್ಡ ಪ್ರಶ್ನೆಯಾಗಿದೆ. ಈ ಪ್ರಶ್ನೆಯ ಕುರಿತು ಸರ್ಕಾರ ಕೂಡಲೇ ಯೋಗ್ಯ ಕ್ರಮ ಕೈಗೊಳ್ಳುವುದು ಅತ್ಯಗತ್ಯ. ಆದ್ದರಿಂದ ಪರಿಸ್ಥಿತಿ ಕೈಮೀರಿ ಹೋಗುವ ಮುಂಚೆ ಸರ್ಕಾರದವರು ಜಂಟೀ ಸಭೆ ಕರೆದು ಮುಷ್ಕರದ ಇತ್ಯರ್ಥ ಮಾಡಬೇಕೆಂದು ವಿನಂತಿಸಿ ನಗರ ಸಭೆ ನೌಕರರಿಗೆ ವೇತನ ಕೊಡುವಸಲುವಾಗಿ ಹೇಗೆಸಂಪನ್ಮೂಲ ಕ್ರೋಢೀಕರಿಸಬೇಕೆಂದು ನಾನು ಈಗಾಗಲೇ ಮಂತ್ರಿಯವರಿಗೆ ಸೂಚನೆ ನೀಡಿದ್ದೇನೆ. ಆದರೆ ಅದರ ಕುರಿತು ಸಚಿವರು ಏನೂ ವಿಚಾರ ನಡೆಸದಿರುವುದು ವಿಷಾದನೀಯ ಎಂದಿದ್ದಾರೆ.

Printed & Published by P. Ramachandra Rao on behalf of the Communist Party of India [Marxist] Karnataka State Committee K. V. Temple Street, Sultanpet, Bangalore-560053 Editorial and Managerial Office : L-56, K. V. Temple Street,